**ದಿನಾಂಕ: 28-08-2012 ರಂದು ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಖಾತೆ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಐದನೇ ಸಭೆಯ ನಡವಳಿಗಳು.**

**: ಅಧ್ಯಕ್ಷತೆ :**

ಶ್ರೀ ಬಿ. ಎನ್. ಬಚ್ಚೇಗೌಡ,
ಸನ್ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಖಾತೆ ಸಚಿವರು
ಮತ್ತು ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

**ಹಾಜರಿದ್ದ ಸದಸ್ಯರು:-** ಅನುಬಂಧ-I ರಲ್ಲಿ ನಮೂದಿಸಿರುವಂತೆ

ಕಾರ್ಮಿಕ ಹಾಗು ರೇಷ್ಮೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರೂ ಆದ ಶ್ರೀ ಬಿ. ಎನ್. ಬಚ್ಚೇಗೌಡರವರು, ಮಂಡಳಿಯ ಸದಸ್ಯ ಕಾರ್ಯದರ್ಶಿಗಳೂ ಆದ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಆಯುಕ್ತರು ಮತ್ತು ಎಲ್ಲಾ ಗೌರವಾನ್ವಿತ ಸದಸ್ಯರುಗಳು ಹಾಗೂ ವಿಶೇಷ ಆಹ್ವಾನಿತರನ್ನು ಜಂಟಿ ಕಾರ್ಮಿಕ ಆಯುಕ್ತರು ಹಾಗು ಜಂಟಿ ಕಾರ್ಯದರ್ಶಿಗಳು ಮಂಡಳಿಯ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು.

ಅಧ್ಯಕ್ಷರ ಅನುಮತಿಯ ಮೇರೆಗೆ ಮಂಡಳಿಯ ಸಭೆಯನ್ನು ಪ್ರಾರಂಭಿಸಲಾಯಿತು.

ಮಂಡಳಿಯ ಇಂದಿನ ಸಭೆಯ ಕಾರ್ಯಸೂಚಿಯನ್ನು ಅನುಮೋದಿಸಲಾಯಿತು.

**ವಿಷಯ 1:- ದಿನಾಂಕ: 30-11-2011 ರಂದು ಜರುಗಿದ ಸಭೆಯ ನಡವಳಿಯನ್ನು ಓದುವುದು ಹಾಗೂ ಸ್ಥಿರೀಕರಿಸುವುದು.**

ಮಾನ್ಯ ಅಧ್ಯಕ್ಷರ ಅನುಮತಿಯ ಮೇರೆಗೆ ದಿನಾಂಕ: 30-11-2011 ರಂದು ನಡೆದ ಮಂಡಳಿಯ 4ನೇ ಸಭೆಯ ನಡವಳಿಗಳನ್ನು ಸಭೆಯಲ್ಲಿ ಮಂಡಿಸಿದ ಜಂಟಿ ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಯಲ್ಲಿ ತಿದ್ದುಪಡಿ ಬದಲಾವಣೆ ಇತ್ಯಾದಿಗಳೇನಾದರು ಇದ್ದಲ್ಲಿ, ಅಭಿಪ್ರಾಯಗಳನ್ನು ತಿಳಿಸುವಂತೆ ಎಲ್ಲಾ ಸದಸ್ಯರುಗಳನ್ನು ಕೋರಿದರು. ಸದಸ್ಯರುಗಳು ನಡವಳಿಯಲ್ಲಿ ಬದಲಾವಣೆ ಅಥವಾ ತಿದ್ದುಪಡಿಯ ಅವಶ್ಯವಿಲ್ಲವೆಂದು ತಿಳಿಸಿದರು.

**ನಿರ್ಣಯ:-ದಿನಾಂಕ: 30-11-2011 ರಂದು ನಡೆದ ಮಂಡಳಿಯ ಸಭೆಯ ನಡವಳಿಗಳನ್ನು ಯಥಾವತ್ತಾಗಿ ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಸ್ಥಿರೀಕರಿಸಿತು.**

Scanned with OKEN Scanner

**ವಿಷಯ 2:- ದಿನಾಂಕ: 30-11-2011 ರ ಸಭೆಯ ನಡವಳಿಯ ನಿರ್ಣಯಗಳ ಅನುಷ್ಠಾನದ ವರದಿ ಮಂಡನೆ**

ಮಂಡಳಿಯ ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಆಗಿರುವ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚೆ ನಡೆಯಿತು. ನಿರ್ಣಯ ಸಂಖ್ಯೆ 04, 05 ಮತ್ತು ಇತರೆ ವಿಷಯಗಳ ಪಟ್ಟಿಯ ನಿರ್ಣಯ ಸಂಖ್ಯೆ- 1 ರ ಬಗ್ಗೆ ಯಾವುದೇ ಚರ್ಚೆ ಇಲ್ಲದೆ ಅನುಮೋದನೆಗೊಂಡವು.

ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ 32 ವಲಯಗಳ ಅಸಂಘಟಿತ ಕಾರ್ಮಿಕರನ್ನು ಒಳಪಡಿಸಿರುವ ವಿಷಯದ ಬಗ್ಗೆ ಅಂದರೆ ನಿರ್ಣಯ ಸಂಖ್ಯೆ 03 ರ ಬಗ್ಗೆ ಮಾನ್ಯ ಸಚಿವರು ಸದಸ್ಯರ ಅಭಿಪ್ರಾಯ ಕೇಳುತ್ತಾ, ಪ್ರಸ್ತುತ ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಯನ್ನು ಕೇವಲ ಅಸಂಘಟಿತ ವಲಯದ 7 ವರ್ಗಗಳ ಕಾರ್ಮಿಕರಿಗೆ ಮಾತ್ರ ಸೀಮಿತಗೊಳಿಸದೆ ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೂ ವಿಸ್ತರಿಸಲು ಹೊಸದಾಗಿ 32 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಮಂಡಳಿಯ ವ್ಯಾಪ್ತಿಗೆ ತರಲಾಗಿದೆ ಎಂದು ತಿಳಿಸಿದರು. ಈ ಪ್ರಕ್ರಿಯೆಯು ಸಾಕಾರಗೊಳ್ಳಲು ಕಾರ್ಮಿಕ ಆಯುಕ್ತರು ಬಹಳಷ್ಟು ಆಸಕ್ತಿವಹಿಸಿ ಈ ಕಾರ್ಯವನ್ನು ಮಾಡಿರುವುದಾಗಿ ತಿಳಿಸಿದರು. ಆದರೆ ಮಂಡಳಿಗೆ ಕೇಂದ್ರದಿಂದ ಯಾವುದೇ ಅನುದಾನ ದೂರೆಯದಿರುವುದು ಮತ್ತು ರಾಜ್ಯ ಸರ್ಕಾರವು ನೀಡುತ್ತಿರುವ ಆಯವ್ಯಯವೂ ಸಹ ಬಹಳ ಕಡಿಮೆಯಿರುವುದರಿಂದ ಹೆಚ್ಚಿನ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಆಗ ಸದಸ್ಯರಾದ ಶ್ರೀ ಶ್ರೀಧರ್ ರಾವ್ ರವರು ಮಾತನಾಡಿ ಮಂಡಳಿಯಲ್ಲಿ ಅಸಂಘಟಿತ ಕಾರ್ಮಿಕರನ್ನು ನೊಂದಣಿ ಮಾಡುವ ಮೂಲಕ ಅವರಿಂದ ನೊಂದಣಿ ಶುಲ್ಕವನ್ನು ಸಂಗ್ರಹಿಸಿ ಅದರಿಂದ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೆ ತರಬಹುದೆಂದು ತಿಳಿಸುತ್ತಾ, ಈ ನೊಂದಣಿ ಪ್ರಕ್ರಿಯೆಯನ್ನು ಪ್ರಚಾರ ಆಂದೋಲನದ ರೀತಿಯಲ್ಲಿ ಕೈಗೊಳ್ಳ-ಬೇಕೆಂದು ಮನವಿ ಮಾಡಿದರು ಮುಂದುವರೆದು, ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಯನ್ನು 7 ವರ್ಗಗಳಿಂದ 39 ವರ್ಗಗಳಿಗೆ ವಿಸ್ತರಿಸಿರುವುದು ಸ್ವಾಗತಾರ್ಹ ಆದರೆ ಮಂಡಳಿಯ ವ್ಯಾಪ್ತಿಗೆ ಈ ಮೊದಲು ಗುರುತಿಸಲಾಗಿದ್ದ 7 ವರ್ಗಗಳನ್ನು ಸಶಕ್ತಗೊಳಿಸಬೇಕಾಗಿತ್ತು ಎಂದು ತಿಳಿಸಿ ಮಂಡಳಿಯಲ್ಲಿ ಅನುಮೋದನೆಗೊಂಡಿದ್ದ ಸಾಮಾಜಿಕ ಭದ್ರತಾ ಯೋಜನೆಗಳನ್ನು ಅನುಷ್ಠಾನ ಮಾಡದೇ ಕೇವಲ ಎನ್‌ಪಿಎಸ್ ಲೈಟ್ -ಸ್ವಾವಲಂಭನ್ ಯೋಜನೆಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಗೀತಾ ಮೆನನ್‌ರವರು ಮಾತನಾಡಿ ದಿನಾಂಕ 11-07-2011 ರಂದು ನಡೆದ ನ್ಯಾಷನಲ್ ಅಡ್ವೈಸರಿ ಸಮಿತಿಯ ಸಭೆ ನಡೆದಿದ್ದು ಸದರಿ ಸಭೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಸಾಮಾಜಿಕ ಭದ್ರತೆ ಒದಗಿಸಲು ಜಿಡಿಪಿ ಯಲ್ಲಿ ಶೇ. 0.5 ರಷ್ಟನ್ನು ಮೀಸಲಿಡಬೇಕೆಂದು ತೀರ್ಮಾನಿಸಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದು ಅತಿ ಶೀಘ್ರವಾಗಿ ಕಾರ್ಮಿಕರ ನೊಂದಣಿ ಕಾರ್ಯ ಪ್ರಾರಂಭಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೋರಿದರು. ಆಗ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ ಮಂಡಳಿಯ ಮುಖಾಂತರ ಈಗಾಗಲೇ ಎನ್‌ಪಿಎಸ್ ಲೈಟ್ ಸ್ವಾವಲಂಭನ್ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈ ಯೋಜನೆಯಡಿ ಈ ಮೊದಲು ಒಳಪಡಿಸಲಾಗಿದ್ದ 7 ವರ್ಗಗಳ ಅಸಂಘಟಿತ ಕಾರ್ಮಿಕರ ಜತೆಗೆ ಹೊಸದಾಗಿ 32 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಸೇರ್ಪಡೆಗೊಳಿಸಲಾಗಿದೆ. ಅಲ್ಲದೇ ಈಗಾಗಲೇ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಖಾಸಗಿ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಬಸ್

Scanned with OKEN Scanner

ಮತ್ತು ಲಾರಿ ಚಾಲಕರಿಗೆ ಉಚಿತವಾಗಿ ಅನುಷ್ಠಾನ ಮಾಡಲಾಗಿದ್ದು, ಇದಲ್ಲದೆ ಜನಶ್ರೀ ಬಿಮಾ ಯೋಜನೆಯನ್ನು ಸಹ ಉಚಿತವಾಗಿ ಶೀಘ್ರದಲ್ಲೇ ಅನುಷ್ಠಾನ ಮಾಡಲಾಗುವುದು ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಅಸಂಘಟಿತ ಕಾರ್ಮಿಕರಿಗೆ ಹಲವು ರೀತಿಯಲ್ಲಿ ಅನುಕೂಲವಾಗುವುದೆಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಕಾರ್ಮಿಕ ಆಯುಕ್ತರು ಮಂಡಳಿಗೆ ಹಣವನ್ನು ಸಂಗ್ರಹಿಸಲು ಯಾವುದೇ ಅವಕಾಶವಿರುವುದಿಲ್ಲ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ರೀತಿಯಲ್ಲಿ ಸೆಸ್ ಸಂಗ್ರಹ ಮಾಡಲೂ ಸಹ ಅವಕಾಶವಿರುವುದಿಲ್ಲ ಎಂದು ಮಾನ್ಯ ಸದಸ್ಯರುಗಳ ಗಮನಕ್ಕೆ ತಂದು, ಸದಸ್ಯರಾದ ಶ್ರೀಧರ್ ರಾವ್‌ರವರು ಹೇಳಿದಂತೆ ನೊಂದಣಿ ಮಾಡಿ ನೊಂದಣಿ ಶುಲ್ಕ ಸಂಗ್ರಹಿಸುವುದಕ್ಕೆ ಮೊದಲು ಸೌಲಭ್ಯಗಳನ್ನು ನೀಡಬೇಕು ಇದರಿಂದ ಜನರು ಸೌಲಭ್ಯಗಳಿಂದ ಆಕರ್ಷಿತರಾಗಿ ಸಾಕಷ್ಟು ಸಂಖ್ಯೆಯಲ್ಲಿ ನೊಂದಣಿಯಾಗುತ್ತಾರೆ ಆಗ ವಂತಿಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಲು ಸಾಧ್ಯವಾಗುತ್ತದೆ. ಈ ಉದ್ದೇಶದಿಂದಲೇ ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯ ವ್ಯಾಪ್ತಿಗೆ ಹೊಸದಾಗಿ 32 ವರ್ಗಗಳನ್ನು ಸೇರಿಸಲಾಗಿದೆ. ಈಗಾಗಲೇ ಜಾರಿಗೊಳಿಸಿರುವ ಚಾಲಕರ ವಿಮಾ ಯೋಜನೆ ಮತ್ತು ಶೀಘ್ರದಲ್ಲೇ ಜಾರಿಗೊಳಿಸಲು ಉದ್ದೇಶಿಸಿರುವ ಜನಶ್ರೀ ಬಿಮಾ ಯೋಜನೆಯನ್ನು ಉಚಿತವಾಗಿ ನೀಡಲು ತೀರ್ಮಾನಿಸಿದೆ. ಅಲ್ಲದೇ ಅಸಂಘಟಿತ ಕಾರ್ಮಿಕರ ವ್ಯಾಪ್ತಿ ಬಹಳ ವಿಸ್ತಾರವಾಗಿದ್ದು, ಈ ನೊಂದಣಿ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿಗಳ ಮಟ್ಟದಿಂದ ನಡೆಸಬೇಕಾಗಿದ್ದು ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಸಹಕಾರ ಬಹಳ ಅಗತ್ಯವಾಗಿದ್ದು ಈಗಾಗಲೇ ನೊಂದಣಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಪ್ರಾವಧಾನಗಳ ಅನ್ವಯ ನೊಂದಣಿ ಪ್ರಕ್ರಿಯೆ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವಿವರಗಳನ್ನು ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಸದಸ್ಯರಾದ ಶ್ರೀಧರ್ ರಾವ್‌ರವರು ಹೇಳುತ್ತಿರುವಂತೆ ಜನರಲ್ಲಿ ಮಂಡಳಿ ಹಾಗೂ ಸಾಮಾಜಿಕ ಭದ್ರತಾ ಯೋಜನೆ ಬಗ್ಗೆ ಸಾಕಷ್ಟು ತಿಳುವಳಿಕೆ ಇರುವುದಿಲ್ಲ ಇದರ ಬಗ್ಗೆ ತಿಳಿಸಬೇಕೆಂದು ಹೇಳಿದಾಗ, ಮಂಡಳಿಯ ಜಂಟಿ ಕಾರ್ಯದರ್ಶಿಗಳು ಮಾತನಾಡಿ ಮಂಡಳಿಯು ಜಾರಿಗೊಳಿಸುತ್ತಿರುವ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ಪ್ರಚಾರ ಕೈಗೊಳ್ಳಲು ಕ್ರಮಗಳನ್ನು ತೆಗೆದುಕೊಂಡಿರುವುದಾಗಿ ಅವುಗಳ ಬಗ್ಗೆ ಮಾಹಿತಿಯನ್ನು ಸಭೆಗೆ ತಿಳಿಸಿದರು. ಕಾರ್ಮಿಕ ಆಯುಕ್ತರು ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿ ಕಾರ್ಮಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂರು ಮಂಡಳಿ ಮತ್ತು ಎರಡು ಸೊಸೈಟಿಗಳ ವ್ಯಾಪ್ತಿಯಲ್ಲಿ ಆಯಾ ಯೋಜನೆ ಹಾಗು ವಿಷಯಗಳಿಗೆ ಸಂಬಂಧಿಸಿದಂತೆ ಪ್ರಚಾರ ಕೈಗೊಳ್ಳಲು ಈಗಾಗಲೇ ಕ್ರಮ ವಹಿಸಿರುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಈಶ್ವರ್ ವಿಶ್ವಕರ್ಮರವರು ಮಾತನಾಡಿ ಅಸಂಘಟಿತ ಕಾರ್ಮಿಕರನ್ನು ಗುರುತಿಸುವುದು ತುಂಬಾ ಕಷ್ಟವಾಗಿದ್ದು, ಅವರನ್ನು ನೊಂದಣಿ ಮಾಡಿಸಿ ಸ್ಮಾರ್ಟ್ ಕಾರ್ಡ್ ನೀಡಿದಾಗ ಮಾತ್ರ ಅವರನ್ನು ಗುರುತಿಸುವುದು ಸುಲಭವಾಗುತ್ತದೆ. ಏಕೆಂದರೆ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಸಹ ಅಸಂಘಟಿತ ಕಾರ್ಮಿಕರ ಗುರುತಿಸುವಿಕೆಯ ತೊಂದರೆಯಿಂದ ಯೋಜನೆಗಳು ಅವರಿಗೆ ತಲುಪುತ್ತಿಲ್ಲ. ಆದ್ದರಿಂದ ಕಾರ್ಮಿಕನಿಗೆ ನೀಡುವ ಸ್ಮಾರ್ಟ್ ಕಾರ್ಡ್‌ನಿಂದ ಅವರ ವೃತ್ತಿಯನ್ನು ಗುರುತಿಸಲು ಸಹಾಯಕವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗು ನೊಂದಣಿ ಶುಲ್ಕದಿಂದ ಬೇರೆ ಬೇರೆ ಸಾಮಾಜಿಕ ಭದ್ರತಾ ಯೋಜನೆಗಳನ್ನೂ ಸಹ ಜಾರಿಗೆ ತರಬಹುದು ಎಂದು ಹೇಳುತ್ತಾ, ಅಸಂಘಟಿತ ಕಾರ್ಮಿಕರ ನೊಂದಣಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಮಾನ್ಯ ಅಧ್ಯಕ್ಷರಲ್ಲಿ ಒತ್ತಾಯಪಡಿಸಿದರು.

Scanned with OKEN Scanner

ಮಾನ್ಯ ಸದಸ್ಯರಾದ ಶ್ರೀ ಈಶ್ವರ್ ವಿಶ್ವಕರ್ಮ ಇವರ ಪ್ರಸ್ತಾವನೆಗೆ ಮಾನ್ಯ ಅಧ್ಯಕ್ಷರು ಉತ್ತರಿಸಿ ಅಸಂಘಟಿತ ವಲಯದ ವ್ಯಾಪ್ತಿ ವಿಸ್ತಾರವಾಗಿರುವುದರಿಂದ, ಹಿಂದಿನ ಸಭೆಯಲ್ಲಿ ತೀರ್ಮಾನಿಸಿದಂತೆ ನೋಂದಣಿ ಶುಲ್ಕ ರೂ.25/- ಮತ್ತು ಸದಸ್ಯತ್ವ ಶುಲ್ಕ ವಾರ್ಷಿಕವಾಗಿ ರೂ. 100/- ಎಂದು ನಿಗಧಿಪಡಿಸಿದ್ದರೂ ಸಹ, ಸಂಗ್ರಹವಾಗುವ ನೋಂದಣಿ ಶುಲ್ಕದಿಂದ ಮಾತ್ರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಮಂಡಳಿಗೆ ರಾಜ್ಯದಿಂದಾಗಲಿ ಅಥವಾ ಕೇಂದ್ರದಿಂದಾಗಲಿ ಅನುದಾನ ದೊರೆಯುತ್ತಿಲ್ಲ. ಕಟ್ಟಡ ಕಾರ್ಮಿಕರ ಮಂಡಳಿಯ ರೀತಿಯಲ್ಲಿ ಸೆಸ್ ಸಂಗ್ರಹಣೆ ಮಾಡಲು ಕಾಯ್ದೆ ಅಡಿಯಲ್ಲಿ ಅವಕಾಶವಿಲ್ಲ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀಮತಿ ಗೀತಾಮೆನನ್ ರವರು ಮಾತನಾಡಿ ಗೃಹ ಕಾರ್ಮಿಕರಿಗೆ ರೂ. 100/- ಗಳನ್ನು ಪಾವತಿಸಲು ಕಷ್ಟವೆಂದು ತಿಳಿಸಿ ಸದರಿ ಶುಲ್ಕವನ್ನು ಆದಷ್ಟು ಕಡಿಮೆ ಮಾಡಬೇಕೆಂದು ಒತ್ತಾಯಿಸಿದರು.

ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, ಈಗಾಗಲೇ ಖಾಸಗಿ ವಾಹನ ಚಾಲಕರ ವಿಮಾ ಯೋಜನೆಯು ಸಾಕಷ್ಟು ಪ್ರಗತಿಯಾಗುತ್ತಿದ್ದು, ಜನಶ್ರೀ ಬಿಮಾ ಯೋಜನೆಯನ್ನೂ ಸಹ ಶೀಘ್ರದಲ್ಲೇ ಅನುಷ್ಠಾನ ಮಾಡಲು ತೀರ್ಮಾನವಾಗಿದ್ದು, ಎರಡು ಯೋಜನೆಗಳಡಿ ನೋಂದಣಿ ಶುಲ್ಕ ಸಂಗ್ರಹಿಸಲಾಗುತ್ತಿದೆ. ಯಾವುದೇ ಸೌಲಭ್ಯವನ್ನು ಉಚಿತವಾಗಿ ನೀಡುವುದಕ್ಕೆ ಬದಲಾಗಿ ಸ್ವಲ್ಪ ಮಟ್ಟಿನ ಶುಲ್ಕ ಸಂಗ್ರಹಿಸಿದಲ್ಲಿ ಫಲಾನುಭವಿಗಳಿಗೂ ಸಹ ಯೋಜನೆ ಸೌಲಭ್ಯಗಳನ್ನು ಕ್ಲೇಮ್ ಮಾಡುವ ಹಕ್ಕು ಬರುತ್ತದೆ ಎಂದು ತಿಳಿಸಿದರು. ಆಗ ಸದಸ್ಯರಾದ ಪ್ರೊ. ಕಾರಂತ್‌ರವರು ಮಾತನಾಡಿ ಅಸಂಘಟಿತ ವಲಯದ ಹೆಚ್ಚು ವರ್ಗಗಳ ಸೇರ್ಪಡೆಯಿಂದ ಯೋಜನೆಗಳ ಪ್ರಗತಿ ಸಾಧ್ಯವಾಗುತ್ತದೆ ಎಂದು ತಿಳಿಸಿ ಟೂರಿಸ್ಟ್ ಗೈಡ್‌ಗಳನ್ನು ಸಹ ಫಲಾನುಭವಿಗಳ ಪಟ್ಟಿಗೆ ಸೇರ್ಪಡೆ ಮಾಡುವಂತೆ ಮನವಿ ಮಾಡಿದರು.

ಮಾನ್ಯ ಸದಸ್ಯರಾದ ಶ್ರೀ ಕೃಷ್ಣರಾವ್, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಇವರು ಮಾತನಾಡಿ ಫಲಾನುಭವಿಗಳಿಂದ ಸ್ವಲ್ಪ ಮಟ್ಟಿಗಾದರು ಶುಲ್ಕ ಸಂಗ್ರಹಿಸುವುದು ಅವಶ್ಯಕ ಎಂದು ಪ್ರತಿಪಾದಿಸಿ ಯಶಸ್ವಿನಿ ಯೋಜನೆಯಡಿ ವಾರ್ಷಿಕ ರೂ. 200/- ಗಳನ್ನು ಸಂಗ್ರಹಿಸಲಾಗುತ್ತಿರುವುದನ್ನು ಉದಾ ಪಡಿಸಿದರು ಯೋಜನೆಯಡಿ ಸುಮಾರು 810 ಶಸ್ತ್ರ ಚಿಕಿತ್ಸೆಯನ್ನು ಸದರಿ ರೂ. 2 ಲಕ್ಷಗಳ ಮಿತಿಯಲ್ಲಿ ನೀಡಲಾಗುತ್ತಿದ್ದು, ಈಗಾಗಲೇ ಸದರಿ ಯೋಜನೆಯಡಿ 30 ಲಕ್ಷ ಫಲಾನುಭವಿಗಳು ಸದಸ್ಯರಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾದಲ್ಲಿ ಸರ್ಕಾರದಿಂದ ಅನುದಾನ ಕೇಳಲು ಸಹ ಅನುಕೂಲವಾಗುತ್ತದೆ ಮತ್ತು ಫಲಾನುಭವಿಗಳು ನೀಡುವ ವಂತಿಕೆಯಿಂದ ಅವರಿಗೆ ಸೌಲಭ್ಯ ಕೇಳಲು ಹಕ್ಕು ದೊರೆಯುತ್ತದೆ. ಹೀಗಾಗಿ ರೂ. 100 ಅಥವಾ ರೂ. 200 ವಂತಿಕೆಯನ್ನು ನೀಡುವುದು ಕಷ್ಟವೇನಲ್ಲ ಎಂದು ತಿಳಿಸಿದರು. ಇದಕ್ಕೆ ಸದಸ್ಯ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯಡಿ ಸಾಕಷ್ಟು ಪ್ರಗತಿ ಇಲ್ಲದಿರುವುದರಿಂದ ಸರ್ಕಾರ ನಿಗಧಿಪಡಿಸಿದ ಆಯವ್ಯಯವನ್ನು ಹಿಂತಿರುಗಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಕಾರ್ಮಿಕ ಆಯುಕ್ತರು ಮಾತನಾಡಿ ಅಸಂಘಟಿತ ವಲಯದಲ್ಲಿ ಬರುವ ಕಾರ್ಮಿಕರಿಗೆ ಚಾಲಕರ ವಿಮಾ ಯೋಜನೆ, ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆ ಹಾಗು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದು, ಶೀಘ್ರದಲ್ಲೇ ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತದೆ. ಈ ಮೂರು ಉಚಿತ ಯೋಜನೆಗಳಾಗಿರುವುದರಿಂದ ಸಾಕಷ್ಟು ಪ್ರಗತಿಯಾಗಿದ್ದು ಅಸಂಘಟಿತ ಕಾರ್ಮಿಕರನ್ನು ಆಕರ್ಷಿಸಲು ಸಹಾಯಕವಾಗಿದೆ ಮತ್ತು ಈ ಮೂರು ಯೋಜನೆಗಳಡಿ ಸಣ್ಣ ಪ್ರಮಾಣದ ನೋಂದಣಿ ಶುಲ್ಕವನ್ನು ಸಂಗ್ರಹ ಮಾಡಿ ಗುರುತಿನ ಚೀಟಿಯನ್ನು ನೀಡುತ್ತಿರುವುದರಿಂದ ಪರೋಕ್ಷವಾಗಿ ಸದಸ್ಯರ ನೋಂದಣಿ ಕಾರ್ಯವೂ ಸಹ ಪ್ರಾರಂಭವಾಗಿದೆ ಎಂದು ತಿಳಿಸಿದರು.

Scanned with OKEN Scanner

ಸರ್ಕಾರ ಗುರುತಿಸಿರುವ 39 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿಯ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ಮಾತನಾಡಿ ಈ ಕೆಳಗಿನ ವರ್ಗಗಳ ಕಾರ್ಮಿಕರು ಸಂಘಟಿತರಾಗಿರುವ ಸಾಧ್ಯತೆ ಇದ್ದು, ವೇತನ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಸದರಿ ಅಸಂಘಟಿತ ವರ್ಗಗಳ ಕಾರ್ಮಿಕರ ಪಟ್ಟಿಯನ್ನು ಪರಿಷ್ಕರಿಸಬೇಕೆಂದು ಸಭೆಯ ಗಮನಕ್ಕೆ ತಂದರು.

1. ಮನೆಗಳಲ್ಲಿ ಬೀಡಿ ಕಟ್ಟುವವರು
2. ಕಾಟನ್ ಜಿನ್ನಿಂಗ್ ಕೆಲಸದಲ್ಲಿ ತೊಡಗಿರುವವರು
3. ಮುದ್ರಣ ಕಾರ್ಮಿಕರು
4. ಕಲ್ಲುಬಂಡೆ ಹೊಡೆಯುವವರು
5. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
6. ಬೀದಿ ಬದಿ ವ್ಯಾಪಾರಿಗಳು
7. ಸಫಾಯಿ ಕರ್ಮಚಾರಿಗಳು
8. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು
9. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮೆನ್‌ಗಳು
10. ಪೋರ್ಟರ್ಸ್

ಮಾನ್ಯ ಅಧ್ಯಕ್ಷರ ಆಕ್ಷೇಪಣೆಗಳಿಗೆ ಸದಸ್ಯ ಕಾರ್ಯದರ್ಶಿಗಳು ಉತ್ತರಿಸಿ ಹೊಸದಾಗಿ ಗುರುತಿಸಿರುವ 32 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿಯ ಹಿನ್ನೆಲೆ ಬಗ್ಗೆ ಪ್ರಸ್ತಾಪಿಸಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ರ ಪ್ರಾವಧಾನಗಳನ್ವಯ "ಅಸಂಘಟಿತ ಕಾರ್ಮಿಕ ಎಂಬ ಪದದ ವ್ಯಾಖ್ಯಾನವನ್ನು ಮಾನ್ಯ ಅಧ್ಯಕ್ಷರು ಹಾಗು ಸದಸ್ಯರುಗಳಿಗೆ ಓದಿ ವಿವರಿಸಿದರು ಇದರಿಂದ ಸಂತೃಪ್ತರಾದ ಎಲ್ಲಾ ಸದಸ್ಯರ ಅನುಮೋದನೆಯೊಂದಿಗೆ ಮಾನ್ಯ ಕಾರ್ಮಿಕ ಸಚಿವರು ಅಸಂಘಟಿತ ಕಾರ್ಮಿಕರ ಪಟ್ಟಿಯನ್ನು ಅನುಮೋದಿಸಿದರು.

ಮಾನ್ಯ ಸದಸ್ಯರಾದ ಪ್ರೋ. ಕಾರಂತ್‌ರವರು ಮಾತನಾಡಿ ಈ ಅಸಂಘಟಿತ ವರ್ಗಗಳ ಪಟ್ಟಿಗೆ ಟೂರಿಸ್ಟ್ ಗೈಡ್‌ಗಳನ್ನು ಸೇರಿಸುವುದು ಸೂಕ್ತವೆಂದು ಪ್ರಸ್ತಾಪಿಸಿದಾಗ ಅವರ ಪ್ರಶ್ನೆಯನ್ನು ಮಂಡಳಿಯ ಇತರೆ ಸದಸ್ಯರುಗಳು ಸ್ವಾಗತಿಸಿ ಟೂರಿಸ್ಟ್ ಗೈಡ್‌ಗಳನ್ನು ಮಂಡಳಿಯ ವ್ಯಾಪ್ತಿಗೆ ಸೇರಿಸಲು ಒಪ್ಪಿದರು ನಂತರ ಸದಸ್ಯರಾದ ಈಶ್ವರ್ ವಿಶ್ವಕರ್ಮರವರು ಫೋಟೊ ಫ್ರೇಮ್ ಕೆಲಸಗಾರರೂ ಸಹ ಅಧಿಕ ಸಂಖ್ಯೆಯಲ್ಲಿದ್ದು, ಅವರನ್ನೂ ಸಹ ಈ ವ್ಯಾಪ್ತಿಗೆ ಸೇರಿಸಬೇಕೆಂದು ಒತ್ತಾಯ ಪೂರ್ವಕವಾಗಿ ಮನವಿ ಮಾಡಿದರು.

ನಂತರ ಸದಸ್ಯರಾದ ಶ್ರೀಧರ್ ರಾವ್‌ರವರು ಮಾತನಾಡಿ ಅಸಂಘಟಿತ ಕಾರ್ಮಿಕರಿಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕೆಂದು ಕೇಳಿದಾಗ ಕಾರ್ಮಿಕ ಆಯುಕ್ತರು ಮಾತನಾಡಿ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರುಗಳನ್ನು ಸಂಪರ್ಕಿಸಬಹುದೆಂದು ಉತ್ತರಿಸಿದರು.

ಸದಸ್ಯರಾದ ಶ್ರೀಮತಿ ಗೀತಾ ಮೆನನ್ ರವರು ಮಾತನಾಡಿ ಅಂತರರಾಜ್ಯ ವಲಸೆ ಕಾರ್ಮಿಕರನ್ನು ಸಹ ಅಸಂಘಟಿತ ಕಾರ್ಮಿಕರ ಮಂಡಳಿಯ ವ್ಯಾಪ್ತಿಗೆ ಒಳಪಡಿಸಿ ನೊಂದಣಿ ಮಾಡಿಸಬೇಕೆಂದು ಸಲಹೆ ನೀಡಿದರು ಆಗ ಕಾರ್ಮಿಕ ಆಯುಕ್ತರು ಮಾತನಾಡಿ ಅಂತರರಾಜ್ಯ ವಲಸೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯ ಅನ್ವಯ ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು, ಅದನ್ನು ಇಲಾಖೆಯಲ್ಲಿ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಚರ್ಚೆಯ ಬಳಿಕ ಈ ಕೆಳಕಂಡ ನಿರ್ಣಯ ಅಂಗೀಕರಿಸಲಾಯಿತು.

Scanned with OKEN Scanner

ನಿರ್ಣಯ :- (ಅ) ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆ ವ್ಯಾಪ್ತಿಗೆ ಪ್ರಸ್ತುತ ಇರುವ ಏಳು ವರ್ಗಗಳ ಅಸಂಘಟಿತ ಕಾರ್ಮಿಕರ ಜೊತೆಗೆ ಸರ್ಕಾರ ಗುರುತಿಸಿರುವ 32 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

(ಆ) ಟೂರಿಸ್ಟ್ ಗೈಡ್‌ಗಳು ಹಾಗೂ ಫೋಟೋಫ್ರೇಮ್ ತಯಾರಿಸುವ ಕಾರ್ಮಿಕರ ದತ್ತಾಂಶವನ್ನು ಸಂಬಂಧಪಟ್ಟ ಇಲಾಖೆ/ ಸಂಸ್ಥೆಗಳಿಂದ ಸಂಗ್ರಹಿಸಿ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

**ವಿಷಯ -3 : ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಖಾಸಗಿ ಬಸ್ ಮತ್ತು ಲಾರಿ ಚಾಲಕರಿಗೆ ಅನುಷ್ಠಾನ ಗೊಳಿಸುವ ಬಗ್ಗೆ.**

ಈ ವಿಷಯವನ್ನು ಕಾರ್ಮಿಕ ಆಯುಕ್ತರು ಸಭೆಯಲ್ಲಿ ಪ್ರಸ್ತಾಪಿಸಿದರು 2011-2012 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಖಾಸಗಿ ವಾಹನಗಳಾದ ಖಾಸಗಿ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಖಾಸಗಿ ಬಸ್ ಮತ್ತು ಲಾರಿ ಚಾಲಕರುಗಳು ವಾಹನ ಚಲಾಯಿಸುತ್ತಿದ್ದಾಗ ಅಪಘಾತಕ್ಕೊಳಗಾದ ಚಾಲಕರಿಗೆ ಹಾಗು ಅಪಘಾತದಲ್ಲಿ ಮೃತಪಟ್ಟ ಚಾಲಕರ ಕುಟುಂಬದವರಿಗೆ ವಿಮಾ ಯೋಜನೆಯ ಮುಖಾಂತರ ಪರಿಹಾರ ನೀಡಿ ಚಾಲಕರು ಹಾಗು ಅವರ ಕುಟುಂಬದವರಿಗೆ ಸಾಮಾಜಿಕ ಹಾಗು ಆರ್ಥಿಕ ಭದ್ರತೆ ಒದಗಿಸಲು ರೂ. 2 ಕೋಟಿ ಆಯವ್ಯಯವನ್ನು ಕಾಯ್ದಿರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಅಪಘಾತಕ್ಕೆ ತುತ್ತಾಗುವ ಚಾಲಕರು ಮತ್ತು ಅವರ ಕುಟುಂಬದವರಿಗೆ ಪರಿಹಾರ ನೀಡಲು **'ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ'** ಎಂಬ ವಿಮಾ ಯೋಜನೆಯನ್ನು ರೂಪಿಸಲಾಗಿದೆ. ಸದರಿ ಯೋಜನೆಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅನುಷ್ಠಾನ ಮಾಡಲು ಸರ್ಕಾರವು ದಿನಾಂಕ : 12-01-2012 ರಂದು ಆದೇಶ ನೀಡಿರುತ್ತದೆ. ಸದರಿ ಯೋಜನೆಗೆ 2012-13ನೇ ಸಾಲಿನಲ್ಲಿ ರೂ. 4.00 ಕೋಟಿ ಆಯವ್ಯಯವನ್ನು ಕಾಯ್ದಿರಿಸಲಾಗಿದ್ದು,ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಡಳಿಯು ಎಲ್ಲಾ ಪೂರ್ವಭಾವಿ ಕ್ರಮಗಳನ್ನು ಕೈಗೊಂಡು, ಸ್ಪರ್ಧಾತ್ಮಕ ಟೆಂಡರ್ ಮೂಲಕ **'ರಾಯಲ್ ಸುಂದರಂ ಅಲೈಯನ್ಸ್ ಇನ್ಶೂರೆನ್ಸ್ ಕಂಪನಿ'** (Royal Sundaram Alliance Insurance Company) ಎಂಬ ವಿಮಾ ಕಂಪನಿಯನ್ನು ಆಯ್ಕೆ ಮಾಡಲಾಗಿದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು, ಲಕ್ಷಾಂತರ ಮಂದಿ ಫಲಾನುಭವಿಗಳನ್ನು ಗುರುತಿಸಿ ನೊಂದಾಯಿಸಿ ಯೋಜನೆಯ ಸೌಲಭ್ಯವನ್ನು ವಿಸ್ತರಿಸಬೇಕಾಗಿರುವುದರಿಂದ, ಆಡಳಿತಾತ್ಮಕ ಕಾರಣಗಳಿಗಾಗಿ ಯೋಜನೆಯಡಿ ಫಲಾನುಭವಿಗಳನ್ನು ನೊಂದಣಿ ಮಾಡಲು ಮತ್ತು ತಂತ್ರಾಂಶ ಅಭಿವೃದ್ಧಿಪಡಿಸಲು **'ಮೈಶೋರ್ ಐಟಿ ಸೊಲ್ಯೂಷನ್ಸ್ ಪ್ರೈ. ಲಿ.' (Myshore IT Solutions Pvt. Ltd.,)** ಎಂಬ ಸಂಸ್ಥೆಯನ್ನು ಈಗಾಗಲೇ ಸ್ಪರ್ಧಾತ್ಮಕ ಟೆಂಡರ್ ಮೂಲಕ ಆಯ್ಕೆ ಮಾಡಿ ಸದರಿ ಸಂಸ್ಥೆಯ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಯೋಜನೆಯಡಿ ಲಕ್ಷಾಂತರ ಮಂದಿ ಫಲಾನುಭವಿಗಳ ನೊಂದಣಿಯಾಗಬೇಕಿರುವುದರಿಂದ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ವಿವರಿಸಿದರು.

ಮುಂದುವರೆದು, ದಿನಾಂಕ :30-06-2012 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಯೋಜನೆಗೆ ಚಾಲನೆ ನೀಡಿರುತ್ತಾರೆ ಹಾಗೂ ಈ ಸಂಸ್ಥೆಯು ದಿನಾಂಕ : 15-07-2012 ರಿಂದ ರಾಜ್ಯದಾದ್ಯಂತ ಯೋಜನೆಯಡಿ ಚಾಲಕರ ನೊಂದಣಿಯನ್ನು ಪ್ರಾರಂಭಿಸಿದ್ದು ದಿನಾಂಕ : 27-07-2012 ರವರೆಗೆ 36,006 ಮಂದಿ ಚಾಲಕರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಂಡಳಿಯ ಅಧ್ಯಕ್ಷರಾದ ಮಾನ್ಯ ಕಾರ್ಮಿಕ ಸಚಿವರು ಯೋಜನೆ ಅನುಷ್ಠಾನ ಹಾಗು ಇಲ್ಲಿಯವರೆಗೆ ಆಗಿರುವ ಪ್ರಗತಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ

Scanned with OKEN Scanner

ಭಾಗ್ಯರವರು ಮಾತನಾಡಿ ಯೋಜನೆಗೆ ಚಾಲಕರ ಪ್ರತಿಕ್ರಿಯೆ ಉತ್ತಮವಾಗಿದ್ದು, ನೊಂದಣಿ ಕೇಂದ್ರಗಳು ಕೇಲವೆ ಸ್ಥಳಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಈ ನೊಂದಣಿ ಕೇಂದ್ರಗಳನ್ನು ವಾರ್ಡ್ ಆಫೀಸ್‌ಗಳಿಗೂ ನೀಡಬೇಕೆಂದು ಸಲಹೆ ನೀಡಿದರು. ಆಗ ಸದಸ್ಯರಾದ ಕಾರ್ಮಿಕ ಆಯುಕ್ತರು ಮಾತನಾಡಿ ನೊಂದಣಿ ಕೇಂದ್ರಗಳನ್ನು ರಾಜ್ಯಾದ್ಯಂತ ಇರುವ ನೆಮ್ಮದಿ ಕೇಂದ್ರಗಳು, ಆರ್‌ಟಿಓ ಕಛೇರಿಗಳ ಹತ್ತಿರ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಬೆಂಗಳೂರು, ಜಿಲ್ಲೆಗಳಲ್ಲಿರುವ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿಗಳು ಮತ್ತು ಆಸಕ್ತಿ ಇರುವ ಕಾರ್ಮಿಕ ಸಂಘಗಳ ಕಛೇರಿಗಳಲ್ಲಿ ಸ್ಥಾಪಿಸಲಾಗಿದ್ದು, ಹೆಚ್ಚಿನ ಕೇಂದ್ರಗಳ ಅವಶ್ಯಕತೆಯಿದ್ದಲ್ಲಿ, ಸಂಚಾರಿ ನೊಂದಣಿ ಕೇಂದ್ರಗಳನ್ನು ಸಹ ಸ್ಥಾಪಿಸಲು ಸೂಚಿಸಲಾಗಿದ್ದು, ಈ ಸಂಚಾರಿ ಕೇಂದ್ರಗಳು ಅಪೇಕ್ಷಿತ ಸ್ಥಳಕ್ಕೆ ಬಂದು ಸೇವೆ ಒದಗಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು .

(ಯೋಜನೆಯ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ)
ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :- ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಚಾಲಕರ ಅಪಘಾತ ಪರಿಹಾರ ಯೋಜನೆಯ ಅನುಷ್ಠಾನವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

**ವಿಷಯ -4 : ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡುವ ಬಗ್ಗೆ.**

ಸದಸ್ಯರಾದ ಕಾರ್ಮಿಕ ಆಯುಕ್ತರು ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು ಭಾರತೀಯ ಜೀವ ವಿಮಾ ನಿಗಮವು ಜಾರಿಗೊಳಿಸುತ್ತಿರುವ ಜನಶ್ರೀ ಬಿಮಾ ಯೋಜನೆಯನ್ನು 2012-13ನೇ ಸಾಲಿನಲ್ಲಿ, ಈಗಾಗಲೇ ಸರ್ಕಾರ ಗುರುತಿಸಿರುವ 39 ವರ್ಗಗಳ ಅಸಂಘಟಿತ ಕಾರ್ಮಿಕರಿಗಾಗಿ ಅನುಷ್ಠಾನ ಮಾಡಲು ಮಂಡಳಿಯು ಕ್ರಮ ಕೈಗೊಳ್ಳುತ್ತಿದೆ. ಅವಶ್ಯವಿದ್ದಲ್ಲಿ ಇನ್ನೂ ಹೆಚ್ಚಿನ ವರ್ಗಗಳ ಕಾರ್ಮಿಕರಿಗೆ ಈ ಸೌಲಭ್ಯ ವಿಸ್ತರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು. ಈ ಯೋಜನೆಯಡಿ ಫಲಾನುಭವಿಗಳಿಗೆ (1) ಸಹಜ ಮರಣ ಪರಿಹಾರ (2) ಅಪಘಾತ ಮರಣ ಪರಿಹಾರ (3) ಅಪಘಾತದಿಂದ ತಾತ್ಕಾಲಿಕ ಮತ್ತು ಶಾಶ್ವತ ದುರ್ಬಲತೆಯ ಪರಿಹಾರ ಮತ್ತು (4) ವಿದ್ಯಾರ್ಥಿ ವೇತನ ಸೌಲಭ್ಯಗಳು ದೊರೆಯುತ್ತವೆ. ಈ ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರವು 2012-13 ನೇ ಸಾಲಿನ ಆಯವ್ಯಯದಲ್ಲಿ ರೂ. 10.00 ಕೋಟಿ ಅನುದಾನವನ್ನು ಕಾಯ್ದಿರಿಸಿದ್ದು, ಸುಮಾರು 9 ಲಕ್ಷ ಫಲಾನುಭವಿಗಳನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಯೋಜನೆಯಡಿ ಇನ್ನು ಹೆಚ್ಚಿನ ಅನುದಾನ ಒದಗಿಸಲು ಸರ್ಕಾರ ಸಿದ್ಧವಿದ್ದು ಸರ್ಕಾರದಿಂದ ಈ ಯೋಜನೆ ಅನುಷ್ಠಾನಕ್ಕೆ ಅನುದಾನದ ಕೊರತೆಯಿರುವುದಿಲ್ಲ ಎಂದು ಸಭೆಯಲ್ಲಿ ವಿವರಿಸಿದರು. ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲಿರುವ ಎಲ್‌ಐಸಿ ಸಂಸ್ಥೆಯ ಅಧಿಕಾರಿಗಳೊಂದಿಗೆ ಈಗಾಗಲೇ ಒಂದೆರಡು ಸುತ್ತಿನ ಸಭೆ ನಡೆಸಿ ಚರ್ಚಿಸಲಾಗಿದ್ದು, ಯೋಜನೆಯ ಅನುಷ್ಠಾನಕ್ಕೆ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಯೋಜನೆ ಅನುಷ್ಠಾನ ಮಾಡುವ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಯೋಜನೆಯು ಸಂಪೂರ್ಣವಾಗಿ ಉಚಿತವಾಗಿದ್ದು ಫಲಾನುಭವಿಯು ನೊಂದಣಿ ಸಂದರ್ಭದಲ್ಲಿ ರೂ. 25/-ಗಳನ್ನು ನೊಂದಣಿ ಶುಲ್ಕವಾಗಿ ಪಾವತಿಸಿ ಯೋಜನೆಯ ಸೌಲಭ್ಯವನ್ನು ಪಡೆಯಬಹುದೆಂದು ವಿವರಿಸಿದರು. ಪ್ರೀಮಿಯಂ ಮೊತ್ತ ಪ್ರತಿ ಫಲಾನುಭವಿಗೆ ವಾರ್ಷಿಕವಾಗಿ ರೂ.200/- ಗಳಾಗಿದ್ದು, ಒಟ್ಟು ಪ್ರೀಮಿಯಂ ಮೊತ್ತದಲ್ಲಿ ಫಲಾನುಭವಿ ಪಾವತಿಸಬೇಕಾದ ಶೇ. 50 ರಷ್ಟು ಪ್ರೀಮಿಯಂ ಮೊತ್ತ ಅಂದರೆ ರೂ. 100/- ಅನ್ನು ಕರ್ನಾಟಕ ರಾಜ್ಯ ಅಸಂಘಟಿತ

Scanned with OKEN Scanner

ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮೂಲಕ ರಾಜ್ಯ ಸರ್ಕಾರ ಪಾವತಿಸುತ್ತದೆ. ಉಳಿದ ಶೇ.50 ರಷ್ಟು ಪ್ರೀಮಿಯಂ ಮೊತ್ತ ಅಂದರೆ ರೂ. 100/- ಭಾರತೀಯ ಜೀವ ವಿಮಾ ನಿಗಮದ ಸಾಮಾಜಿಕ ಭದ್ರತಾ ನಿಧಿಯಿಂದ ಪಾವತಿಸಲಾಗುತ್ತದೆ ಎಂದು ವಿವರಿಸಿದರು.

ಯೋಜನೆಯ ವಿಶೇಷತೆಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.

ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :- ಮಂಡಳಿಯು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜಾರಿಗೊಳಿಸಲು ಉದ್ದೇಶಿಸಿರುವ ಜನಶ್ರೀ ಬಿಮಾ ಯೋಜನೆಯ ಅನುಷ್ಠಾನವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

**<u>ವಿಷಯ -5 : ಹೊಸದಾಗಿ ಗುರುತಿಸಲಾಗಿರುವ ಅಸಂಘಟಿತ ವರ್ಗಗಳ ಕಾರ್ಮಿಕರ ಪಟ್ಟಿಗೆ ಅನುಮೋದನೆ ಪಡೆಯುವ ಬಗ್ಗೆ.</u>**

ಕಾರ್ಮಿಕ ಆಯುಕ್ತರು ಈ ವಿಷಯವನ್ನು ಸಭೆಯ ಮುಂದೆ ಪ್ರಸ್ತಾಪಿಸಿದರು ಮಂಡಳಿಯ 4ನೇ ಸಭೆಯಲ್ಲಿ ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಯನ್ನು ಕೇವಲ ಅಸಂಘಟಿತ ವಲಯದ 7 ವರ್ಗಗಳ ಕಾರ್ಮಿಕರಿಗೆ ಮಾತ್ರ ಸೀಮಿತಗೊಳಿಸಿರುವುದರಿಂದ ಬಹುಸಂಖ್ಯಾತ ಅಸಂಘಟಿತ ವರ್ಗಗಳ ಕಾರ್ಮಿಕರುಗಳು ಯೋಜನೆಯ ವ್ಯಾಪ್ತಿಯಿಂದ ಹೊರಗುಳಿದು ಈ ಯೋಜನೆಯ ಲಾಭದಿಂದ ವಂಚಿತರಾಗುತ್ತಿದ್ದಾರೆ ಹಾಗು ಯೋಜನೆಯ ವ್ಯಾಪ್ತಿಯ ಹೊರಗುಳಿದ ಹಲವಾರು ವರ್ಗಗಳ ಕಾರ್ಮಿಕರು ಹಾಗೂ ಸದರಿ ವರ್ಗಗಳಿಗೆ ಸಂಬಂಧಿಸಿದ ಸಂಘ ಸಂಸ್ಥೆಗಳು ವ್ಯಾಪ್ತಿಯ ಹೊರಗಿರುವ ಎಲ್ಲಾ ಅಸಂಘಟಿತ ಕಾರ್ಮಿಕ ವರ್ಗದವರನ್ನು ಯೋಜನೆ ವ್ಯಾಪ್ತಿಗೆ ತಂದು ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಬೇಕೆಂಬ ಒತ್ತಾಯಗಳು ಬರುತ್ತಿದ್ದ ಕಾರಣ ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಯಲ್ಲಿ ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೂ ವಿಸ್ತರಿಸಬೇಕೆಂದು ನಿರ್ಣಯಿಸಲಾಗಿತ್ತು. ಅದರಂತೆ ಹೊಸದಾಗಿ 32 ವಿವಿಧ ವರ್ಗಗಳ ಕಾರ್ಮಿಕರನ್ನು ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರಲು ಸರ್ಕಾರವು ದಿನಾಂಕ : 12-06-2012 ರಂದು ಆದೇಶ ನೀಡಿರುವುದರಿಂದ ಸದರಿ ಪಟ್ಟಿಗೆ ಘಟನೋತ್ತರವಾಗಿ ಅನುಮೋದಿಸಬೇಕೆಂದು ಮಂಡಳಿಯನ್ನು ಕೋರಲಾಯಿತು.

ಈ ವಿಷಯದ ಬಗ್ಗೆ ಈಗಾಗಲೇ ದಿನಾಂಕ : 30-11-2011 ರಂದು ನಡೆದ ಮಂಡಳಿ 4ನೇ ಸಭೆಯ ನಿರ್ಣಯಗಳ ಅನುಷ್ಠಾನದ ವರದಿ ಮಂಡನೆಯ ಸಮಯದಲ್ಲಿ ಚರ್ಚಿಸಲಾಗಿದೆ.

ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :- ಮಂಡಳಿಯ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ಒಳಪಡಿಸಲು ಹೊಸದಾಗಿ ಗುರುತಿಸಲಾಗಿರುವ 32 ವರ್ಗಗಳ ಅಸಂಘಟಿತ ಕಾರ್ಮಿಕರ ಪಟ್ಟಿಯನ್ನು ಅನುಮೋದಿಸಿ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

Scanned with OKEN Scanner

**ವಿಷಯ –6 ಎನ್‌ಪಿಎಸ್ ಲೈಟ್–ಸ್ವಾವಲಂಭನ್ ಯೋಜನೆಯ ಪ್ರಗತಿ ವರದಿ ಮಂಡಿಸುವುದು.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು ಮಂಡಳಿಯು ಕಳೆದ ಸಾಲಿನಲ್ಲಿ ಎರಡು ಫೆಸಿಲಿಟೇಟರ್ ಸಂಸ್ಥೆಗಳಾದ 1) ಕಂಪ್ಯೂಟರ್ ಏಜ್ ಮ್ಯಾನೇಜ್‌ಮೆಂಟ್ ಸರ್ವೀಸಸ್ (CAMS) 2) ಅಲಂಕಿತ್ ಅಸ್ಯೆನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ (Alankit) ಸಂಸ್ಥೆಗಳನ್ನು ಗುರುತಿಸಿ ಸದರಿ ಫೆಸಿಲಿಟೇಟರ್ ಸಂಸ್ಥೆಗಳ ಸಹಕಾರದಿಂದ ಅಸಂಘಟಿತ ವಲಯದ ಏಳು ವರ್ಗಗಳ ಹಾಗು ಜಿ.ಐ.ಜೆಡ್ ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಬರುವ ಎಲ್ಲಾ ವರ್ಗಗಳ ಕಾರ್ಮಿಕರಿಗೆ ಕಾರ್ಮಿಕ ಸಂಘಟನೆಗಳು ಹಾಗೂ ಆಯಾ ವಲಯಗಳ ಕಾರ್ಮಿಕರ ಪ್ರತಿನಿಧಿಗಳ ಸಹಯೋಗದೊಂದಿಗೆ ಮಂಡಳಿಯ ಎನ್‌ಪಿಎಸ್ ಲೈಟ್–ಸ್ವಾವಲಂಭನ್ ಯೋಜನೆಯನ್ನು ಅನುಷ್ಠಾನ ಮಾಡಲಾಗಿತ್ತು.

ಮಾರ್ಚ್–2011 ರ ಮಾಹೆಯಿಂದ ಜುಲೈ –2012 ರ ಮಾಹೆಯ ಅವಧಿಯಲ್ಲಿ ಎನ್‌ಪಿಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಟ್ಟು 12396 ಮಂದಿ ವಂತಿಕೆದಾರರನ್ನು ಒಳಪಡಿಸಲಾಗಿದೆ. ಅಲ್ಲದೇ ಯೋಜನೆಯ ವ್ಯಾಪ್ತಿಗೆ ಹೊಸದಾಗಿ 32 ವರ್ಗಗಳನ್ನು ಒಳಪಡಿಸಿರುವುದರಿಂದ ಯೋಜನೆಯಡಿ ಹೆಚ್ಚಿನ ಪ್ರಗತಿ ಸಾಧಿಸುವ ನಿರೀಕ್ಷೆಯಿದೆ ಎಂದು ವಿವರಿಸಿದರು.

ಮುಂದುವರೆದು, ಯೋಜನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಕೋರಿ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಅವರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :– ಎನ್‌ಪಿಎಸ್ ಲೈಟ್– ಸ್ವಾವಲಂಭನ್ ಪಿಂಚಣಿ ಯೋಜನೆಯಡಿ ಸಾಧಿಸಿರುವ ಪ್ರಗತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ವಿಷಯ –7 : ಪ್ರವರ್ತಕರಾಗಿ (Facilitators) ನೇಮಕವಾಗಿರುವ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳಿಗೆ ಅನುಮೋದನೆ ಪಡೆಯುವ ಬಗ್ಗೆ.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸಿದರು ಎನ್‌ಪಿಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆಯಡಿ ಮಂಡಳಿಯು ಪಿಎಫ್‌ಆರ್‌ಡಿಎ ನವದೆಹಲಿ ಈ ಪ್ರಾಧಿಕಾರದ ಬಳಿ ಅಗ್ರಿಗೇಟರ್ ಆಗಿ ನೇಮಕಗೊಂಡು ಯೋಜನೆಯನ್ನು ಅನುಷ್ಠಾನ ಮಾಡುತ್ತಿದೆ. ಮಂಡಳಿಯಲ್ಲಿ ಪೂರ್ಣ ಮಟ್ಟದ ಸೌಕರ್ಯಗಳು ಹಾಗು ಅವಶ್ಯ ಸಿಬ್ಬಂದಿ ಇಲ್ಲದಿರುವ ಕಾರಣ, ಹಣಕಾಸು ಇಲಾಖೆಯು ನೀಡಿದ ಸಲಹೆ/ಸೂಚನೆಗಳನ್ನು ಆಧಾರವಾಗಿಟ್ಟುಕೊಂಡು ಯೋಜನೆಯಲ್ಲಿ ಮಂಡಳಿಯ ಪರವಾಗಿ ಕಾರ್ಯನಿರ್ವಹಿಸಲು, ಪಿಎಫ್‌ಆರ್‌ಡಿಎ (Pension Fund Regulatory and Development Authority) ನವದೆಹಲಿ ಈ ಪ್ರಾಧಿಕಾರದ ಬಳಿ ಅಗ್ರಿಗೇಟರ್‌ಗಳಾಗಿ ನೋಂದಣಿಯಾಗಿರುವ ಕಂಪ್ಯೂಟರ್ ಏಜ್ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈ. ಲಿ. ಚೆನ್ನೈ (Computer Age Management Services Pvt. Ltd.,) ಹಾಗು ಅಲಂಕಿತ್ ಅಸ್ಯೆನ್‌ಮೆಂಟ್ಸ್ ಲಿ., ನವದೆಹಲಿ (Alankit Assignments Ltd.,) ಇವರುಗಳೊಂದಿಗೆ ಒಡಂಬಡಿಕೆ (Memorandum of Understanding) ಮಾಡಿಕೊಂಡು ಈ ಸಂಸ್ಥೆಗಳನ್ನು ಯೋಜನೆಯಲ್ಲಿ ಫೆಸಿಲಿಟೇಟರ್‌ಗಳಾಗಿ ಕಾರ್ಯನಿರ್ವಹಿಸಲು ನೇಮಿಸಿಕೊಳ್ಳಲಾಗಿತ್ತು.

Scanned with OKEN Scanner

ಆದರೆ ಯೋಜನೆಯನ್ನು ಕರ್ನಾಟಕ ರಾಜ್ಯದಾದ್ಯಂತ ಅನುಷ್ಠಾನ ಮಾಡುತ್ತಿರುವುದರಿಂದ ಮೇಲೆ ತಿಳಿಸಿದ 2 ಸಂಸ್ಥೆಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ನೊಂದಣಿ ಸಾಧ್ಯ ಆಗದೆ ಇರುವುದು ಕಂಡು ಬಂದುದರಿಂದ, ಹಾಗು ಯೋಜನೆಯ ವ್ಯಾಪ್ತಿಗೆ ಹೆಚ್ಚಿನ ಸಂಖ್ಯೆಯ ಅಸಂಘಟಿತ ವರ್ಗದ ಕಾರ್ಮಿಕರನ್ನು ಒಳಪಡಿಸಲು, ಉದ್ದೇಶಿಸಿರುವುದರಿಂದ ಯೋಜನೆಯ ಅನುಷ್ಠಾನದಲ್ಲಿ ಆಸಕ್ತಿ ಹೊಂದಿರುವಂತಹ ಇನ್‌ವೆಸ್ಟ್‌ಮೆಂಟ್ ಇಂಡಿಯ ಮೈಕ್ರೋ ಪೆನ್ಷನ್ ಸರ್ವೀಸಸ್ ಸಿಸ್ಟಮ್ ಪ್ರೈ. ಲಿ. (Investment India Micro Pension Services pvt. Ltd.) ಮತ್ತು ಇನ್‌ಸ್ಟಿಟ್ಯೂಶನ್ ಫಾರ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ (Institution for Financial Management and Reaseach) ಎಂಬ ಇನ್ನೂ ಎರಡು ಸಂಸ್ಥೆಗಳನ್ನು ಸಹ ಯೋಜನೆಯಡಿ ಪ್ರವರ್ತಕರಾಗಿ (Facilitators) ಕಾರ್ಯ ನಿರ್ವಹಿಸಲು ನೇಮಿಸಿಕೊಂಡು ಸದರಿ ಸಂಸ್ಥೆಗಳ ಜತೆ ದಿನಾಂಕ : 12-04-2012 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಹೆಚ್ಚಿನ ಫೆಸಿಲಿಟೇಟರ್‌ಗಳ ನೇಮಕಾತಿಯಿಂದ ಮಂಡಳಿಗೆ ಯಾವುದೇ ರೀತಿಯ ಆರ್ಥಿಕ ಹೊರೆ ಬೀಳುವುದಿಲ್ಲ ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯನ್ನು ಫೆಸಿಲಿಟೇಟರ್‌ಗಳು ಮಂಡಳಿಯ ಪರವಾಗಿ ಅನುಷ್ಠಾನ ಮಾಡುತ್ತಾರೆ. ಈ ಸಂಸ್ಥೆಗಳಿಗೆ ಪಿಎಫ್‌ಆರ್‌ಡಿಎ ನವದೆಹಲಿ ಇವರು ಪ್ರಸ್ತುತ ಒಂದು ಎನ್‌ಪಿಎಸ್ ಲೈಟ್ -ಸ್ವಾವಲಂಭನ್ ಖಾತೆ ತೆರೆಯಲು ನಿಗಧಿಪಡಿಸಿರುವ ರೂ. 120/- ರಂತೆ ಶುಲ್ಕವನ್ನು ಮಂಡಳಿಯ ಮೂಲಕ ಪಾವತಿಸಲಾಗುತ್ತದೆ.

ಆದ್ದರಿಂದ, ಹೊಸದಾಗಿ ನೇಮಿಸಿಕೊಳ್ಳಲಾದ ಎರಡು ಫೆಸಿಲಿಟೇಟರ್‌ಗಳ ನೇಮಕಾತಿ ಹಾಗು ಒಡಂಬಡಿಕೆಗೆ ಘಟನೋತ್ತರ ಮಂಜೂರಾತಿಯನ್ನು ಕೋರಿದರು.

ಮಂಡಳಿಯ ಸದಸ್ಯರಾದ ಪ್ರೊ. ಕಾರಂತ್‌ರವರು ಮಾತನಾಡಿ ಯೋಜನೆಯಡಿ ನೇಮಿಸಿಕೊಳ್ಳಲಾಗಿರುವ ಮೇಲೆ ತಿಳಿಸಿದ ಫೆಸಿಲಿಟೇಟರ್ ಸಂಸ್ಥೆಗಳಿಗೆ ವಂತಿಕೆದಾರರ ನೊಂದಣಿಗೆ ಸಂಬಂಧಿಸಿದಂತೆ ಗುರಿಯನ್ನೇನಾದರು ನಿಗಧಿಪಡಿಸಲಾಗಿದೆಯೇ? ಎಂದು ಪ್ರಶ್ನಿಸಿದರು. ಆಗ ಜಂಟಿ ಕಾರ್ಯದರ್ಶಿಗಳು ಉತ್ತರಿಸುತ್ತಾ ಇತ್ತೀಚೆಗೆ ಅಂದರೆ ದಿನಾಂಕ : 21-08-2012 ರಂದು ನಡೆದ ಫೆಸಿಲಿಟೇಟರ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರತಿ ಫೆಸಿಲಿಟೇಟರ್ ಸಂಸ್ಥೆಗೆ ಹತ್ತು ಸಾವಿರ ವಂತಿಕೆದಾರರನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸುವಂತೆ ಗುರಿ ನಿಗಧಿಪಡಿಸಲಾಗಿದೆ ಎಂದು ತಿಳಿಸಿದರು.

ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :- ಎನ್‌ಪಿಎಸ್ ಲೈಟ್ – ಸ್ವಾವಲಂಭನ್ ಪಿಂಚಣಿ ಯೋಜನೆಯಡಿ ಫೆಸಿಲಿಟೇಟರ್‌ಗಳಾಗಿ ಹೊಸದಾಗಿ ನೇಮಕವಾಗಿರುವ ಇನ್‌ವೆಸ್ಟ್‌ಮೆಂಟ್ ಇಂಡಿಯ ಮೈಕ್ರೋ ಪೆನ್ಷನ್ ಸರ್ವೀಸಸ್ ಸಿಸ್ಟಮ್ ಪ್ರೈ. ಲಿ. (Investment India Micro Pension Services pvt. Ltd.) ಮತ್ತು ಇನ್‌ಸ್ಟಿಟ್ಯೂಶನ್ ಫಾರ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ (Institution for Financial Management and Reaseach) ಎಂಬ ಸಂಸ್ಥೆಗಳೊಂದಿಗಿನ ಒಡಂಬಡಿಕೆಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

Scanned with OKEN Scanner

**ವಿಷಯ -8 : ಮಂಡಳಿಯ 2011-12 ಸಾಲಿನ ಪರಿಷ್ಕೃತ ಆಯವ್ಯಯದ ಮಂಡನೆ ಹಾಗು ಅನುಮೋದನೆ ಪಡೆಯುವ ಬಗ್ಗೆ.**

ಈ ವಿಷಯವನ್ನು ಕಾರ್ಮಿಕ ಆಯುಕ್ತರು ಸಭೆಯ ಮುಂದೆ ಮಂಡಿಸಿ 2011-12 ನೇ ಸಾಲಿನಲ್ಲಿ ಮಂಡಳಿಯ ಆದಾಯ ಮತ್ತು ವೆಚ್ಚಗಳ ಬಗ್ಗೆ ವಿವರಿಸಿ ಮಂಡಳಿಯ ಸದಸ್ಯರ ಅನುಮೋದನೆಯನ್ನು ಕೋರಿದರು.

**ಕರ್ನಾಟಕ ಸರ್ಕಾರ**
**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.**
**2011-2012 ನೇ ಸಾಲಿನ ಪರಿಷ್ಕೃತ ಆಯವ್ಯಯ**
**(ರೂ. ಲಕ್ಷಗಳಲ್ಲಿ)**

| | | ಸಾರಾಂಶ | | (ಲಕ್ಷ ರೂ. ಗಳಲ್ಲಿ) |
|---|---|---|---|---|
| ಕ್ರ. ಸಂ | 01-04-2011 ರಂದು ಇರುವಂತೆ ಪ್ರಾರಂಭಿಕ ಶಿಲ್ಕು | 2011-2012 ನೇ ಸಾಲಿನ ಸ್ವೀಕೃತಿಗಳು ಮತ್ತು ಆದಾಯಗಳು | 2011-12 ನೇ ಸಾಲಿನಲ್ಲಿ ವೆಚ್ಚ | 31-03-2012 ರಂದು ಇರುವಂತೆ ಅಖೈರು ಶಿಲ್ಕು |
| 1 | 2 | 3 | 4 | 5 |
| 1 | **ರೂ. 537.56499** | **ರೂ. 347.81631** | **ರೂ. 49.73791** | **ರೂ. 835.64339** |

ನಿರ್ಣಯ :- 2011-12 ನೇ ಸಾಲಿನ ಮಂಡಳಿಯ ಆದಾಯ ಮತ್ತು ವೆಚ್ಚಗಳ ವಿವರಣೆಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

Scanned with OKEN Scanner

## ವಿಷಯ–09 : ಮಂಡಳಿಯ 2012–13 ನೇ ಸಾಲಿನ ಅಂದಾಜು ಆಯವ್ಯಯದ ಮಂಡನೆಯ ವಿವರಗಳು

ಈ ವಿಷಯವನ್ನು ಕಾರ್ಮಿಕ ಆಯುಕ್ತರು ಸಭೆಯ ಮುಂದೆ ಮಂಡಿಸಿ 2012–13 ನೇ ಸಾಲಿನಲ್ಲಿ ಮಂಡಳಿಯ ಅಂದಾಜು ಆದಾಯ ಮತ್ತು ವೆಚ್ಚಗಳ ಬಗ್ಗೆ ವಿವರಿಸಿ ಮಂಡಳಿಯ ಸದಸ್ಯರ ಅನುಮೋದನೆಯನ್ನು ಕೋರಿದರು.

**ಕರ್ನಾಟಕ ಸರ್ಕಾರ**
**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.**
2012–2013 ನೇ ಸಾಲಿನ ಆಯವ್ಯಯ
(ರೂ. ಲಕ್ಷಗಳಲ್ಲಿ)

| | | ಸಾರಾಂಶ | | (ಲಕ್ಷ ರೂ. ಗಳಲ್ಲಿ) |
|---|---|---|---|---|
| ಕ್ರ. ಸಂ | 01–04–2012 ರಂದು ಇರುವಂತೆ ಪ್ರಾರಂಭಿಕ ಶಿಲ್ಕು | 2012–2013 ನೇ ಸಾಲಿನಲ್ಲಿ ನಿರೀಕ್ಷಿಸಲಾದ ಸ್ವೀಕೃತಿಗಳು ಮತ್ತು ಆದಾಯಗಳು | 2012–2013 ನೇ ಸಾಲಿನಲ್ಲಿ ಸಂಭವಿಸಬಹುದಾದ ವೆಚ್ಚ | 31–03–2013 ರಂದು ಇರುವಂತೆ ಅಖೈರು ಶಿಲ್ಕು |
| 1 | 2 | 3 | 4 | 5 |
| 1 | ರೂ. 835.64339 | ರೂ. 2075.00 | ರೂ. 2018.1 | ರೂ. 892.54339 |

Scanned with OKEN Scanner

| ಕರ್ನಾಟಕ ಸರ್ಕಾರ<br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.<br>2012–2013 ನೇ ಸಾಲಿನ ಆದಾಯ ಮತ್ತು ವೆಚ್ಚಗಳ ಆಯವ್ಯಯ ಪತ್ರ | | | | | | |
|---|---|---|---|---|---|---|
| ಕ್ರಸಂ | ಆದಾಯ | ರೂ. ಲಕ್ಷಗಳಲ್ಲಿ | ಕ್ರಸಂ | ವೆಚ್ಚಗಳು | ರೂ ಲಕ್ಷಗಳಲ್ಲಿ | ಷರಾ |
| 1 | 2 | 3 | 4 | 5 | 6 | 7 |
| 1 | ಪ್ರಾರಂಭಿಕ ಶಿಲ್ಕು (ದಿ. 01–04–2012) | 835.64339 | 1 | ಅಧಿಕಾರಿಗಳ/ಸಿಬ್ಬಂದಿ ವೇತನ | 17.00 | |
| 2 | ಫಲಾನುಭವಿಗಳಿಂದ ಬರಬಹುದಾದ ನೋಂದಣಿ ಶುಲ್ಕದ ಮೊತ್ತ | 125.00 | 2 | ಬಾಹ್ಯ ಮೂಲಗಳಿಂದ ನಿಯೋಜಿಸಲಾಗುವ ಸಿಬ್ಬಂದಿ ವೇತನ. | 25.00 | |
| 3 | ಸರ್ಕಾರದಿಂದ ನಿರೀಕ್ಷಿಸಲಾದ ಅನುದಾನ (ಎನ್‌ಪಿಎಸ್ ಲೈಟ್ ಸ್ವಾವಲಂಭನ್) | 500.00 | 3 | ಪ್ರಯಾಣ ಭತ್ಯೆ | 1.50 | |
| 4 | ಸರ್ಕಾರದಿಂದ ನಿರೀಕ್ಷಿಸಲಾದ ವಂತಿಕೆ (ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ) | 400.00 | 4 | ಕಛೇರಿ ಲೇಖನ ಸಾಮಗ್ರಿಗಳು | 2.50 | |
| 5 | ಸರ್ಕಾರದಿಂದ ನಿರೀಕ್ಷಿಸಲಾದ ವಂತಿಕೆ (2012–13 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುವ ಜನಶ್ರೀ ಬಿಮಾ ಯೋಜನೆ) | 1000.00 | 5 | ಪುಸ್ತಕಗಳು/ವೃತ್ತ ಪತ್ರಿಕೆ/ಮ್ಯಾಗಝಿನ್ಸ್ | 0.50 | |
| 6 | ಸರ್ಕಾರದಿಂದ ನಿರೀಕ್ಷಿಸಲಾದ ಅನುದಾನ (ಮಂಡಳಿಗೆ) | 50.00 | 6 | ವಿದ್ಯುತ್ ಮತ್ತು ನೀರು | 0.25 | |

Scanned with OKEN Scanner

| | | | | | | |
|---|---|---|---|---|---|---|
| ಒಟ್ಟು | | 2075 | 7 | ವಾಹನಗಳ ಬಾಡಿಗೆ | 3.00 | |
| | | | 8 | ವಾಹನ ಇಂಧನ ವೆಚ್ಚ ಮತ್ತು ನಿರ್ವಹಣೆ | 2.00 | |
| | | | 9 | ಗಣಕಯಂತ್ರ ಮತ್ತು ಪೆರಿಫೆರಲ್ಸ್ ಖರೀದಿ ಮತ್ತು ನಿರ್ವಹಣೆ | 2.00 | |
| | | | 10 | ದೂರವಾಣಿ | 00.75 | |
| | | | 11 | ಅಂತರ್ಜಾಲ ಸೌಲಭ್ಯ | 00.50 | |
| | | | 12 | ಮಂಡಳಿಯ ಕಾರ್ಯಚಟುವಟಿಕೆಗಳ ಗಣಕೀಕರಣ ಮತ್ತು ತಂತ್ರಾಂಶ ಅಭಿವೃದ್ಧಿ | – | |
| | | | 13 | ಮುದ್ರಣ | 05.00 | |
| | | | 14 | ಪೀಠೋಪಕರಣ ಖರೀದಿ. | 02.00 | |
| | | | 15 | ಫ್ಯಾಕ್ಸ್, ಡುಪ್ಲಿಕೇಟಿಂಗ್, ಫ್ರಾಂಕಿಂಗ್ ಮಷಿನ್ ಯಂತ್ರಗಳ ಖರೀದಿ | 1.00 | |
| | | | 16 | ಸ್ಟ್ಯಾಂಪ್ಸ್ ಮತ್ತು ಕೊರಿಯರ್ | 00.60 | |
| | | | 17 | ಮಂಡಳಿಯ ಸಭೆ, ತರಬೇತಿ, ವಿಚಾರಗೋಷ್ಠಿ | 02.00 | |
| | | | 18 | ಪ್ರಚಾರ, ಜಾಹಿರಾತು | 20.00 | |
| | | | 19 | ಲೆಕ್ಕಪರಿಶೋಧನ ಶುಲ್ಕ | 0.50 | |
| | | | 20 | ಯೋಜನೆಗಳ ಚಾಲನಾ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚ | 18.00 | |
| | | | 21 | ರಜೆ ಸಂಬಳ ಮತ್ತು ಪೆನ್ಷನ್ ಕಾಂಟ್ರಿಬ್ಯೂಷನ್ | 0.50 | |
| | | | 22 | ಟೆಂಡರ್ ಪ್ರಕಟಣೆ | 1.50 | |

Scanned with OKEN Scanner

| | | | | | | |
|---|---|---|---|---|---|---|
| | | | 23 | ಕಛೇರಿಯ ಇತರೇ ವೆಚ್ಚ | 02.00 | |
| | | | | ಒಟ್ಟು ಆಡಳಿತಾತ್ಮಕ ವೆಚ್ಚ | 108.1 | |
| | | | 24 | ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲು ಅಂದಾಜಿಸಲಾದ ಒಟ್ಟು ವೆಚ್ಚ | | |
| | | | | i) ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆ (ಸಮಾನಾಂತರ ವಂತಿಕೆ) | 500.00 | |
| | | | | ii) ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ (ಪ್ರೀಮಿಯಂ) | 510.00 | |
| | | | | iii) ಜನಶ್ರೀ ಬಿಮಾ ಯೋಜನೆ (ಪ್ರೀಮಿಯಂ) | 900.00 | |
| | | | | ಒಟ್ಟು | 1910.00 | |
| | ಒಟ್ಟು ಆದಾಯ | 2910.64339 | | ಒಟ್ಟು ವೆಚ್ಚ | 2018.1 | |

ನಿರ್ಣಯ :- 2012-13 ನೇ ಸಾಲಿನ ಮಂಡಳಿಯ ಅಂದಾಜು ಆದಾಯ ಮತ್ತು ವೆಚ್ಚಗಳ ವಿವರಣೆಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

Scanned with OKEN Scanner

**ವಿಷಯ -10 : ಕಾರ್ಮಿಕ ಇಲಾಖೆ ಅಥವ ಸರ್ಕಾರದ ಇತರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಧಿಕಾರಿಗಳು/ಸಿಬ್ಬಂದಿಗಳನ್ನು ಏಜೆನ್ಸಿಗಳ ಮೂಲಕ ಗುತ್ತಿಗೆ/ಹೊರಗುತ್ತಿಗೆ ಆಧಾರದಲ್ಲಿ ಮಂಡಳಿಗೆ ಹೆಚ್ಚುವರಿ ವ್ಯವಸ್ಥಾಪಕ ಹಾಗು ಸಿಬ್ಬಂದಿ ವರ್ಗದವರ ಹುದ್ದೆಗಳನ್ನು ಸೃಜಿಸುವ ಬಗ್ಗೆ.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಪ್ರಸ್ತಾಪಿಸಿದರು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು 2009 ರಲ್ಲಿ ರಚಿತವಾಗಿದ್ದು, ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಪಿಂಚಣಿ ಯೋಜನೆ ಹಾಗು 2010-11 ನೇ ಸಾಲಿನಿಂದ 2011-12 ಹಾಗೂ 2012-13 ನೇ ಸಾಲಿನ ಆಯವ್ಯಯಗಳಲ್ಲಿ ಕ್ರಮವಾಗಿ ಘೋಷಣೆಯಾದ ಯೋಜನೆಗಳಾದ **"ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ"**ಮತ್ತು **"ಜನಶ್ರೀ ಬಿಮಾ ಯೋಜನೆ"** ಗಳ ಪೈಕಿ ಈಗಾಗಲೇ ಖಾಸಗಿ ವಾಣಿಜ್ಯ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಅನುಷ್ಠಾನ ಮಾಡಲು ಮಂಡಳಿಯು ಕ್ರಮ ಕೈಗೊಂಡಿರುತ್ತದೆ. ಜನಶ್ರೀ ಬಿಮಾ ಯೋಜನೆ ಜಾರಿ ಮಾಡಲು ಸಕಲ ಕ್ರಮಗಳನ್ನು ಕೈಗೊಂಡಿದ್ದು, ಈ ಎರಡೂ ಯೋಜನೆಗಳಡಿ ಅಸಂಘಟಿತ ವಲಯದ ವಿವಿಧ ವರ್ಗಗಳ ಲಕ್ಷಾಂತರ ಸಂಖ್ಯೆಯ ಫಲಾನುಭವಿಗಳನ್ನು ನೋಂದಣಿ ಮಾಡಬೇಕಾದ ಗುರುತರವಾದ ಜವಾಬ್ದಾರಿ ಮಂಡಳಿಯ ಮೇಲಿರುತ್ತದೆ.

ಮಂಡಳಿಯ ಮೊದಲನೆ ಸಭೆಯಲ್ಲಿ ಎಂಎಸ್‌ಡಬ್ಲ್ಯೂ ವಿದ್ಯಾರ್ಹತೆಯ ಸಂಶೋಧನಾ ಸಹಾಯಕರು, (ರೀಸರ್ಚ್ ಅಸಿಸ್ಟಂಟ್), ಡಾಟಾ ಎಂಟ್ರಿ ಅಪರೇಟರ್ಸ್, ಶೀಘ್ರಲಿಪಿಗಾರರು (ಸ್ಟೇನೋಗ್ರಾಫರ್ಸ್) ಕ್ಲರ್ಕ್‌ಗಳು. ಇತ್ಯಾದಿ ಹುದ್ದೆಗಳನ್ನು ಹೊರ ಗುತ್ತಿಗೆಯ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅನುಮೋದನೆ ಪಡೆಯಲಾಗಿತ್ತು.. ಹೀಗೆ ಭರ್ತಿ ಮಾಡುವ ಮೇಲೆ ತಿಳಿಸಿದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಅನುಭವವುಳ್ಳ ಹೆಚ್ಚಿನ ವಿದ್ಯಾರ್ಹತೆ ಪಡೆದವರನ್ನು ವ್ಯವಸ್ಥಾಪಕರನ್ನಾಗಿ ನೇಮಿಸಿಕೊಳ್ಳುವುದು ಅವಶ್ಯಕವೆಂದು ಕಂಡು ಬಂದಿರುತ್ತದೆ. ಅಲ್ಲದೆ ಮೇಲೆ ತಿಳಿಸಿದ ಈ ಯೋಜನೆಗಳ ಅನುಷ್ಠಾನಕ್ಕೆ ಮೊದಲು ಫಲಾನುಭವಿಗಳ ನೋಂದಣಿ, ಯೋಜನೆಯ ಪ್ರಚಾರ ಮುಂತಾದವುಗಳಿಗೆ ಕ್ರಮಬದ್ಧವಾಗಿ ಕಾರ್ಯಕ್ರಮವನ್ನು ರೂಪಿಸಬೇಕಾಗಿರುತ್ತದೆ. ಪ್ರತಿವರ್ಷ ಹೊಸ ಹೊಸ ಯೋಜನೆಗಳ ಅನುಷ್ಠಾನದ ಜವಾಬ್ದಾರಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮೇಲೆ ಬರುತ್ತಿರುವುದನ್ನು ಮಂಡಳಿಯ ಗಮನಕ್ಕೆ ತಂದರು.

ಈ ಹಿನ್ನೆಲೆಯಲ್ಲಿ ಮಂಡಳಿಯ ಕಾರ್ಯಚಟುವಟಿಕೆಗಳು ಸಾಕಷ್ಟು ವಿಸ್ತಾರವಾಗುತ್ತಿರುವುದರಿಂದ ಮಂಡಳಿಯಲ್ಲಿ ಅನುಮೋದಿತವಾಗಿರುವ ಕಲ್ಯಾಣ ಯೋಜನೆಗಳನ್ನು ಅನುಷ್ಠಾನ ಮಾಡಲು ಪೂರ್ವಸಿದ್ಧತಾ ಕೆಲಸಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಾಗಿದ್ದು, ಕೆಲಸದ ಒತ್ತಡ ಇನ್ನೂ ಹೆಚ್ಚಾಗುವ ಸಂಭವವಿದೆ ಹಾಗು ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರಿ ಕೆಲಸ ಹಾಗು ಕಾರ್ಯವಿಧಾನಗಳನ್ನು ನಿರ್ವಹಿಸುವ ಅನುಭವ ಹೊಂದಿರುವ ಅಧಿಕಾರಿಗಳ ಅವಶ್ಯಕತೆ ಇರುವ ಕಾರಣ, ಮಂಡಳಿಯಲ್ಲಿ ಹೆಚ್ಚುತ್ತಿರುವ ಕೆಲಸದ ಒತ್ತಡವನ್ನು ನಿಭಾಯಿಸಲು ಹಾಗು ಮಂಡಳಿಯ ಸದಸ್ಯ ಕಾರ್ಯದರ್ಶಿಗಳು/ ಜಂಟಿ ಕಾರ್ಯದರ್ಶಿಯವರಿಗೆ ಸಹಕಾರಿಯಾಗಲು ಕಾರ್ಮಿಕ ಇಲಾಖೆಯಲ್ಲಿ ಅಥವ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವ ಅನುಭವವಿರುವ ನುರಿತ ಅಧಿಕಾರಿ/ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಲ್ಲಿ ಮಂಡಳಿಯ ಕಾರ್ಯ ಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸಲು ಅನುಕೂಲವಾಗುತ್ತದೆಂದು ಮಂಡಳಿಯ ಸಭೆಯಲ್ಲಿ ಮಂಡಿಸಿದರು.

Scanned with OKEN Scanner

ಆದ್ದರಿಂದ, ಮಂಡಳಿಯ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗೆ ಕಾರ್ಮಿಕ ಇಲಾಖೆ ಅಥವ ಸರ್ಕಾರದ ಇತರೆ ಇಲಾಖೆಗಳಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಿರುವ ಅಧಿಕಾರಿಗಳು/ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಹಾಗು ಮಂಡಳಿ ಅನುಷ್ಠಾನಗೊಳಿಸುವ ಪ್ರತಿಯೊಂದು ಸಾಮಾಜಿಕ ಭದ್ರತಾ ಯೋಜನೆಗಳ ಮೇಲ್ವಿಚಾರಣೆಗೆ ಒಬ್ಬರಂತೆ ಒಟ್ಟು 4 ಮಂದಿ ವ್ಯವಸ್ಥಾಪಕ ಹುದ್ದೆಯನ್ನು ಸೃಜಿಸಬಹುದಾಗಿದ್ದು, ಈ ವಿಷಯವನ್ನು ಮಂಡಳಿಯ ಸದಸ್ಯರ ಅವಗಾಹನೆಗೆ ಮಂಡಿಸುತ್ತ ಮಂಡಳಿಯ ಅನುಮೋದನೆ ಕೋರಿದರು.

**ನಿರ್ಣಯ :- ಮಂಡಳಿಯ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗೆ ಕಾರ್ಮಿಕ ಇಲಾಖೆ ಅಥವ ಸರ್ಕಾರದ ಇತರೆ ಇಲಾಖೆಗಳಲ್ಲಿ ನಿವೃತ್ತರಾಗಿರುವ ಅಧಿಕಾರಿಗಳು/ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಹಾಗು ಮಂಡಳಿ ಅನುಷ್ಠಾನಗೊಳಿಸುವ ಪ್ರತಿಯೊಂದು ಸಾಮಾಜಿಕ ಭದ್ರತಾ ಯೋಜನೆಗಳ ಮೇಲ್ವಿಚಾರಣೆಗೆ ಒಬ್ಬರಂತೆ 4 ಮಂದಿ ವ್ಯವಸ್ಥಾಪಕ ಹುದ್ದೆಯನ್ನು ಸೃಜಿಸಲು ಮಂಡಳಿಯು ಸರ್ವಾನುಮತದಿಂದ ಅಂಗೀಕರಿಸಿತು.**

**ವಿಷಯ -11 : ಮಂಡಳಿಯ ಕಛೇರಿಯ ಕೆಲಸ ಕಾರ್ಯಗಳ ನಿರ್ವಹಣೆಗೆ ವ್ಯವಸ್ಥಾಪಕ ಹುದ್ದೆಯನ್ನು ಸೃಜಿಸಿರುವುದರ ಬಗ್ಗೆ ಘಟನೋತ್ತರ ಮಂಜೂರಾತಿ ಪಡೆಯುವ ಬಗ್ಗೆ.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸಿದರು ಮಂಡಳಿಯು 2010-11 ನೇ ಸಾಲಿನಿಂದ ಎನ್‌ಪಿಎಸ್ ಲೈಟ್-ಸ್ವಾವಲಂಭನ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. 2011-12ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾದ ಯೋಜನೆ **"ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು"** ಅನುಷ್ಠಾನ ಮಾಡಲು ಮಂಡಳಿಯು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. 2012-13 ನೇ ಸಾಲಿನಲ್ಲಿ ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲು ಸಕಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಎರಡು ಯೋಜನೆಗಳಡಿ ಅಸಂಘಟಿತ ವಲಯದ ವಿವಿಧ ವರ್ಗಗಳ ಲಕ್ಷಾಂತರ ಸಂಖ್ಯೆಯ ಫಲಾನುಭವಿಗಳನ್ನು ನೋಂದಣಿ ಮಾಡಬೇಕಾಗಿದ್ದು ಮಂಡಳಿಯಲ್ಲಿ ಸಿಬ್ಬಂದಿಯ ಕೊರತೆಯಿರುತ್ತದೆ.

ಅಲ್ಲದೇ ಈಗಾಗಲೇ ಮಂಡಳಿಯ ಮೊದಲನೆ ಸಭೆಯಲ್ಲಿ ಎಂಎಸ್‌ಡಬ್ಲೂ ವಿದ್ಯಾರ್ಹತೆಯ ರೀಸರ್ಚ್ ಅಸಿಸ್ಟಂಟ್ ಎಂಬ ನಾಲ್ಕು ಹುದ್ದೆಗಳನ್ನು ಹೊರ ಗುತ್ತಿಗೆಯ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅನುಮೋದನೆ ಪಡೆಯಲಾಗಿದೆ. ಹೀಗೆ ಭರ್ತಿ ಮಾಡುವ ರೀಸರ್ಚ್ ಅಸಿಸ್ಟಂಟ್ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಅನುಭವವುಳ್ಳ ಎಂಬಿಎ ಅಥವ ಅದಕ್ಕಿಂತ ಮೇಲ್ಪಟ್ಟ ವಿದ್ಯಾರ್ಹತೆ ಪಡೆದವರನ್ನು ವ್ಯವಸ್ಥಾಪಕರನ್ನಾಗಿ ನೇಮಿಸಿಕೊಳ್ಳುವುದು ಅವಶ್ಯಕವೆಂದು ಕಂಡು ಬಂದ ಹಿನ್ನೆಲೆಯಲ್ಲಿ ಮೇಲಿನ ಎಲ್ಲಾ ಕಾರ್ಯಗಳನ್ನು ಸಮರ್ಥವಾಗಿ ಮೇಲ್ವಿಚಾರಣೆ ಮಾಡಲು ಎಂಬಿಎ ಅಥವ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯ ಅಧಿಕಾರಿಯ ತುರ್ತು ಅವಶ್ಯಕತೆ ಇದ್ದ ಪ್ರಯುಕ್ತ ದಿನಾಂಕ : 02-05-2012 ರಿಂದ ಅನ್ವಯಿಸುವಂತೆ **ಎಂ.ಬಿ.ಎ ಪದವಿ ಪಡೆದ ಕು. ಆರ್. ನಮ್ರತ ಎಂಬುವವರನ್ನು** ವ್ಯವಸ್ಥಾಪಕರಾಗಿ **ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಮಾಸಿಕ ರೂ. 20,000/-** (ಕನ್ಸಾಲಿಡೇಟೆಡ್)ವೇತನವನ್ನು ನಿಗಧಿಪಡಿಸಿ ನೇಮಿಸಿಕೊಳ್ಳಲಾಗಿದೆ. ಈ ನೇಮಕಾತಿಗೆ ಮಾನ್ಯ ಅಧ್ಯಕ್ಷರಿಂದ ಕಡತದಲ್ಲಿ ಈಗಾಗಲೇ ಅನುಮೋದನೆ ಪಡೆಯಲಾಗಿದೆ ಎಂದು ವಿವರಿಸಿದರು. ಮಂಡಳಿಯಿಂದ ಗುತ್ತಿಗೆ ಆಧಾರದ ಮೇಲೆ ವ್ಯವಸ್ಥಾಪಕ ಹುದ್ದೆಗೆ

Scanned with OKEN Scanner

ನೇಮಿಸಿಕೊಂಡಿರುವ ಆರ್. ನಮ್ರತ ಎಂಬ ಅಭ್ಯರ್ಥಿಯ ಗುತ್ತಿಗೆ ಆಧಾರದ ನೇಮಕಾತಿಗೆ ಘಟನೋತ್ತರ ಮಂಜೂರಾತಿಯನ್ನು ಕೋರಿದರು.

ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ಮಾತನಾಡಿ ಈ ರೀತಿಯ ವ್ಯವಸ್ಥಾಪಕ ಹುದ್ದೆಗೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವಾಗ ಅನುಭವಕ್ಕೆ ಹೆಚ್ಚಿನ ಆದ್ಯತೆ ನೀಡಿ, ಅನುಭವವಿರುವ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಬೇಕೆಂದು ಹಾಗು ಅವರಿಗೆ ಕೆಲಸ ಕಾರ್ಯಗಳ ಸಮರ್ಪಕ ಹಂಚಿಕೆಯಾಗಬೇಕು ಎಂದು ತಿಳಿಸಿದರು. ಚರ್ಚೆಯ ನಂತರ ಮಂಡಳಿಯು ಈ ಕೆಳಕಂಡಂತೆ ನಿರ್ಣಯ ತೆಗೆದುಕೊಂಡಿತು.

> **ನಿರ್ಣಯ :- ಮಂಡಳಿಯ ಕೆಲಸ ಕಾರ್ಯಗಳ ನಿರ್ವಹಣೆಗೆ ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಮಾಸಿಕ ರೂ. 20,000/- (ಕನ್ಸಾಲಿಡೇಟೆಡ್)ವೇತನದ ಆಧಾರದಲ್ಲಿ ವ್ಯವಸ್ಥಾಪಕ ಹುದ್ದೆಗೆ ನೇಮಿಸಿಕೊಂಡಿರುವ ಕು. ಆರ್. ನಮ್ರತ ಎಂಬ ಅಭ್ಯರ್ಥಿಯ ಗುತ್ತಿಗೆ ಆಧಾರದ ನೇಮಕಾತಿಗೆ ಮಂಡಳಿಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿಯನ್ನು ನೀಡಿತು.**

**ವಿಷಯ -12 : ನಿವೃತ್ತ ಸಹಾಯಕ ಕಾರ್ಮಿಕ ಆಯುಕ್ತರನ್ನು ಗುತ್ತಿಗೆ ಆಧಾರದ ಮೇಲೆ ಮಂಡಳಿಗೆ ಸಲಹಾಗಾರರಾಗಿ ನೇಮಕ ಮಾಡುವ ಬಗ್ಗೆ:-**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸಿದರು ಮಂಡಳಿಯು 2010-11 ನೇ ಸಾಲಿನಿಂದ ಎನ್‌ಪಿಎಸ್ ಲೈಟ್-ಸ್ವಾವಲಂಬನ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. 2011-12ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾದ ಯೋಜನೆ **"ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು"** ಅನುಷ್ಠಾನ ಮಾಡಲು ಮಂಡಳಿಯು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. 2012-13 ನೇ ಸಾಲಿನಲ್ಲಿ ಜನಶ್ರೀ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲು ಸಕಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಎರಡು ಯೋಜನೆಗಳಡಿ ಅಸಂಘಟಿತ ವಲಯದ ವಿವಿಧ ವರ್ಗಗಳ ಲಕ್ಷಾಂತರ ಸಂಖ್ಯೆಯ ಫಲಾನುಭವಿಗಳನ್ನು ನೋಂದಣಿ ಮಾಡಬೇಕಾಗಿದ್ದು ಮಂಡಳಿಯಲ್ಲಿ ಸಿಬ್ಬಂದಿಯ ಕೊರತೆಯಿರುತ್ತದೆ. ಮಂಡಳಿಯ ಕಾರ್ಯಚಟುವಟಿಕೆಗಳು ಸಾಕಷ್ಟು ವಿಸ್ತಾರಗೊಂಡಿದ್ದು, ಮಂಡಳಿಯಲ್ಲಿ ಅನುಮೋದಿತವಾಗಿರುವ ಕಲ್ಯಾಣ ಯೋಜನೆಗಳನ್ನು ಅನುಷ್ಠಾನ ಮಾಡಲು ಪೂರ್ವಸಿದ್ದತಾ ಕೆಲಸಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಾಗಿದ್ದು, ಕೆಲಸದ ಒತ್ತಡ ಇನ್ನೂ ಹೆಚ್ಚಾಗುವ ಸಂಭವವಿದ್ದು, ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರಿ ಕೆಲಸ ಹಾಗು ಕಾರ್ಯವಿಧಾನಗಳನ್ನು ನಿರ್ವಹಿಸುವ ಅನುಭವ ಹೊಂದಿರುವ ನಿವೃತ್ತ ಅಧಿಕಾರಿಗಳ ಅವಶ್ಯಕತೆ ಇರುತ್ತದೆ. ಮಂಡಳಿಯಲ್ಲಿ ಹೆಚ್ಚುತ್ತಿರುವ ಕೆಲಸದ ಒತ್ತಡವನ್ನು ನಿಭಾಯಿಸಲು ಹಾಗು ಮಂಡಳಿಯ ಸದಸ್ಯ ಕಾರ್ಯದರ್ಶಿಗಳು/ ಜಂಟಿ ಕಾರ್ಯದರ್ಶಿಯವರಿಗೆ ಸಹಕಾರಿಯಾಗಲು ಕಾರ್ಮಿಕ ಇಲಾಖೆಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತರಾಗಿ ಕಾರ್ಯನಿರ್ವಹಿಸಿ ಇತ್ತೀಚೆಗಷ್ಟೇ ನಿವೃತ್ತರಾಗಿರುವ ಅನುಭವ ಹೊಂದಿರುವ ಶ್ರೀ ಷಣ್ಮುಖಪ್ಪ ಹೆಚ್.ಕೆ ಇವರನ್ನು ಮಂಡಳಿಯ ಅಧ್ಯಕ್ಷರ ಅನುಮತಿ ಪಡೆದು ಮಂಡಳಿಗೆ ಗುತ್ತಿಗೆ **ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾಸಿಕ ರೂ. 25,000/-** (ಕನ್ಸಾಲಿಡೇಟೆಡ್) ವೇತನವನ್ನು ನಿಗಧಿಪಡಿಸಿ, ಸಲಹಾಗಾರರಾಗಿ (Consultant) ನೇಮಿಸಿಕೊಳ್ಳಲಾಗಿದ್ದು ಈ ನೇಮಕಾತಿಗೆ ಮಂಡಳಿಯ ಸದಸ್ಯರ ಘಟನೋತ್ತರ ಮಂಜೂರಾತಿಯನ್ನು ಕೋರಿದರು.

ಕಾರ್ಮಿಕ ಆಯುಕ್ತರು ಮಾತನಾಡಿ, ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುವ ಶ್ರೀ ಷಣ್ಮುಖಪ್ಪ ಹೆಚ್.ಕೆ ಇವರಿಗೆ ಇಲಾಖೆಯಲ್ಲಿ ಹಲವಾರು ವರ್ಷ ಕೆಲಸ ಮಾಡಿರುವ

Scanned with OKEN Scanner

ಅನುಭವವಿರುವುದಾಗಿ ತಿಳಿಸಿದರು. ಚರ್ಚೆಯ ನಂತರ ಮಂಡಳಿಯಲ್ಲಿ ಈ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

> **ನಿರ್ಣಯ :- ಮಂಡಳಿಯ ಕೆಲಸ ಕಾರ್ಯಗಳ ನಿರ್ವಹಣೆಗೆ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾಸಿಕ ರೂ. 25,000/- (ಕನ್ಸಾಲಿಡೇಟೆಡ್)ವೇತನದ ಆಧಾರದಲ್ಲಿ ನಿವೃತ್ತ ಸಹಾಯಕ ಕಾರ್ಮಿಕ ಆಯುಕ್ತರಾದ ಶ್ರೀ ಷಣ್ಮುಖಪ್ಪ ಹೆಚ್.ಕೆ ಇವರನ್ನು ಗುತ್ತಿಗೆ ಆಧಾರದ ಮೇಲೆ ಸಲಹಾಗಾರರಾಗಿ (Consultant) ಆಗಿ ನೇಮಕಾತಿ ಮಾಡಿರುವುದಕ್ಕೆ ಮಂಡಳಿಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿಯನ್ನು ನೀಡಿತು.**

**ವಿಷಯ -13 : ಗುತ್ತಿಗೆ/ಹೊರಗುತ್ತಿಗೆ ಸಿಬ್ಬಂದಿ ವರ್ಗದವರ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಬಗ್ಗೆ.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸುತ್ತಾ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ದಿನಾಂಕ 04-11-2009 ರಂದು ನಡೆದ ಮೊದಲನೇ ಸಭೆಯಲ್ಲಿ ಸಿಬ್ಬಂದಿಗಳನ್ನು ಸೃಜಿಸಿ ನೇಮಿಸಲು ಅನುಮೋದನೆ ನೀಡಿರುತ್ತದೆ. ಆ ಸಂದರ್ಭದಲ್ಲಿ ಸಿಬ್ಬಂದಿಗಳಿಗೆ ಪಾವತಿಸಬಹುದಾದ ವೇತನ ದರವನ್ನು ಸಹ ಅನುಮೋದಿಸಿರುತ್ತದೆ. ಪ್ರಸ್ತುತ ಸಂದರ್ಭಕ್ಕೆ ಹೋಲಿಸಿದಾಗ 2009-10ನೇ ಸಾಲಿನಲ್ಲಿ ಮಂಡಳಿಯು ನೀಡಿರುವ ಅನುಮೋದನೆಯನ್ನು ಪರಮಾರ್ಶಿಸಿದಾಗ ಸಿಬ್ಬಂದಿಗಳಿಗೆ ನಿಗಧಿಪಡಿಸಿರುವ ವೇತನ ಕಡಿಮೆ ಎಂದು ಭಾವಿಸಲಾಗಿದೆ. ಈ ವೇತನವನ್ನು ನಿಗಧಿಪಡಿಸಿ ಈಗಾಗಲೇ ಮೂರು ವರ್ಷ ಸಮೀಪಿಸುತ್ತಿದೆ. ಮಾರುಕಟ್ಟೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಯನ್ನು ಪಡೆಯಲು ಹೆಚ್ಚಿನ ವೇತನ ದರ ಪಾವತಿ ಮಾಡಬೇಕಾಗಿರುತ್ತದೆ. ಅದರಲ್ಲೂ ಅನುಭವವುಳ್ಳ ಉತ್ತಮ ಅಭ್ಯರ್ಥಿಗಳು ಈಗಾಗಲೇ ನಿಗಧಿಪಡಿಸಿರುವ ವೇತನಕ್ಕೆ ಲಭ್ಯವಾಗುವುದು ಕಷ್ಟವಾಗಿರುತ್ತದೆ. ಉತ್ತಮ ವಿದ್ಯಾರ್ಹತೆ ಪಡೆದು ಕೆಲಸದಲ್ಲಿ ಹೆಚ್ಚಿನ ಅನುಭವ ಪಡೆದ ಅಧಿಕಾರಿ/ಸಿಬ್ಬಂದಿ ವರ್ಗದವರು ಕಡಿಮೆ ವೇತನಕ್ಕೆ ಕೆಲಸ ಮಾಡಲು ನಿರಾಕರಿಸುವ ಪರಿಸ್ಥಿತಿ ಬಂದಿರುತ್ತದೆ ಎಂದು ವಿವರಿಸಿದರು. ಆಗ ಜಂಟಿ ಕಾರ್ಯದರ್ಶಿಗಳ ಪ್ರಸ್ತಾವನೆಗೆ ಮಾನ್ಯ ಸಚಿವರೂ ಸಹ ಧ್ವನಿಗೂಡಿಸಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸದಸ್ಯರಾದ ಕಾರ್ಮಿಕ ಆಯುಕ್ತರು ಮಾತನಾಡಿ ಮಂಡಳಿಯಲ್ಲಿ ಸಿಬ್ಬಂದಿಯು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆಂಬ ಮಾಹಿತಿಯನ್ನು ಜಂಟಿ ಕಾರ್ಯದರ್ಶಿಗಳಿಂದ ಪಡೆದು ಕೊಂಡರು. ಸುಮಾರು 2 ವರ್ಷಗಳಿಂದ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ. ವಿದ್ಯಮಾನಗಳನ್ನು ಗಮನಿಸಿದಾಗ ಖಾಸಗಿ ಮತ್ತು ಇನ್ನಿತರೆ ವಲಯಗಳಲ್ಲಿ ತಾಂತ್ರಿಕ ಜ್ಞಾನ ಪಡೆದ ಅನುಭವವುಳ್ಳ ಅಧಿಕಾರಿ/ಸಿಬ್ಬಂದಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳಿದ್ದು ಬೇಡಿಕೆ ಹೆಚ್ಚಾಗಿರುವುದರಿಂದ ಸೂಕ್ತ ಅಭ್ಯರ್ಥಿಗಳನ್ನು ಮಂಡಳಿಯಲ್ಲಿ ಪಡೆದುಕೊಳ್ಳುವುದು ಕಷ್ಟವಾಗುತ್ತಿದ್ದು, ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೀಡುತ್ತಿರುವ ವೇತನ ದರದ ಆಧಾರದಲ್ಲಿ ಪಾವತಿಸುವುದು ಸೂಕ್ತವಾಗಿ ಕಂಡುಬರುತ್ತದೆ ಎಂದು ವೇತನ ಪರಿಷ್ಕರಣೆ ವಿವರಗಳನ್ನು ಮಂಡಳಿಯ ಸದಸ್ಯರಿಗೆ ಈ ಕೆಳಗಿನಂತೆ ವಿವರಿಸುತ್ತಾ ವೇತನ ಹೆಚ್ಚಳಕ್ಕೆ ಮಂಡಳಿಯ ಅನುಮೋದನೆ ಕೋರಿದರು. ಮಂಡಳಿಯ ಎಲ್ಲ ಸದಸ್ಯರು ಯಾವುದೇ ಆಕ್ಷೇಪಣೆ ಇಲ್ಲದೆ ಪ್ರಸ್ತಾವನೆಯನ್ನು ಅನುಮೋದಿಸಿದರು.

Scanned with OKEN Scanner

| ಕ್ರ. ಸಂ. | ಹುದ್ದೆಯ ಹೆಸರು | ಅನುಮೋದನೆಗೊಂಡಿರುವ ಹಾಲಿ ವೇತನ ಶ್ರೇಣಿ | ಪರಿಷ್ಕೃತ ವೇತನ ಶ್ರೇಣಿ |
|---|---|---|---|
| 1. | ರಿಸರ್ಚ್ ಅಸಿಸ್ಟೆಂಟ್ | ರೂ. 9,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 11,306/- + ಪಿ.ಎಫ್ ಮತ್ತು ಇಎಸ್ಐ |
| 2. | ಕ್ಲರ್ಕ್ (ಪ್ರಥಮ ದರ್ಜೆ ಸಹಾಯಕರ ಸಮಾನಾಂತರ ಹುದ್ದೆ) | ರೂ. 8,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 10,506/- + ಪಿ.ಎಫ್ ಮತ್ತು ಇಎಸ್ಐ |
| 3. | ಡಾಟಾ ಎಂಟ್ರಿ ಆಪರೇಟರ್ಸ್ (ದ್ವಿತೀಯ ದರ್ಜೆ ಸಹಾಯಕರ ಸಮಾನಾಂತರ ಹುದ್ದೆ) | ರೂ. 7,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 9,306/- + ಪಿ.ಎಫ್ ಮತ್ತು ಇಎಸ್ಐ |
| 4. | ಶೀಘ್ರಲಿಪಿಗಾರರು | ರೂ. 8,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 10,506/- + ಪಿ.ಎಫ್ ಮತ್ತು ಇಎಸ್ಐ |
| 5. | ಜವಾನರು | ರೂ. 6,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 8,306/- + ಪಿ.ಎಫ್ ಮತ್ತು ಇಎಸ್ಐ |
| 6. | ಡ್ರೈವರ್ಸ್ | ರೂ. 8,500+ ಪಿ.ಎಫ್ ಮತ್ತು ಇ.ಎಸ್.ಐ. | ರೂ. 9,306/- + ಪಿ.ಎಫ್ ಮತ್ತು ಇಎಸ್ಐ |

ಸುದೀರ್ಘ ಚರ್ಚೆಯ ಬಳಿಕ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಿರ್ಣಯ :- ಗುತ್ತಿಗೆ/ಹೊರಗುತ್ತಿಗೆ ಆಧಾರದ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆಯನ್ನು ಮಂಡಳಿಯು ಸರ್ವಾನುಮತದಿಂದ ಅಂಗೀಕರಿಸಿತು.**

## ಇತರೆ ವಿಷಯಗಳು

**ವಿಷಯ -1 : 2011-12ನೇ ಸಾಲಿನ ಮಂಡಳಿಯ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುವ ಬಗ್ಗೆ**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯ ಮುಂದೆ ಮಂಡಿಸಿದರು. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ದಿನಾಂಕ : 01-04-2011 ರಿಂದ 31-03-2012 ರವರೆಗಿನ ಆದಾಯ ಮತ್ತು ವೆಚ್ಚಗಳ ಬಗ್ಗೆ ಖಾಸಗಿ ಲೆಕ್ಕ ಪರಿಶೋಧಕರಿಂದ ಪರಿಶೀಲನೆ ನಡೆಸಲಾಗಿದ್ದು, ಸದರಿ ಲೆಕ್ಕಪರಿಶೋಧನಾ ವರದಿಯನ್ನು ಮಂಡಳಿಯ ಸದಸ್ಯರ ಅವಗಾಹನೆಗೆ ಮಂಡಿಸಿ ಅನುಮೋದನೆ ಕೋರಿದರು.

Scanned with OKEN Scanner

ಈ ವಿಷಯದ ಬಗ್ಗೆ ಹೆಚ್ಚಿನ ಚರ್ಚೆ ನಡೆಯದೆ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

> **ನಿರ್ಣಯ :- 2011-12ನೇ ಸಾಲಿನ ಮಂಡಳಿಯ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಳಿಯು ಸರ್ವಾನುಮತದಿಂದ ಅಂಗೀಕರಿಸಿತು.**

**ವಿಷಯ -2 : ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವ ಬಗ್ಗೆ ಮಂಜೂರಾತಿ ಕೋರಿ.**

ಈ ವಿಷಯವನ್ನು ಮಂಡಳಿಯ ಜಂಟಿ ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸಿದರು ಮಂಡಳಿಯು ಈಗಾಗಲೇ ಎರಡು ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದು, ಲಕ್ಷಾಂತರ ಸಂಖ್ಯೆಯ ಅಸಂಘಟಿತ ವಲಯದ ಫಲಾನುಭವಿಗಳ ನೋಂದಣಿ ಹಾಗೂ ಸಂಬಂದಿಸಿದ ಇತರೆ ಕೆಲಸ ಕಾರ್ಯಗಳಿಗೆ ತುರ್ತಾಗಿ ವಿವಿಧ ಇಲಾಖೆಗಳು, ಏಜೆನ್ಸಿ, ಸಂಸ್ಥೆ ಹಾಗೂ ಬ್ಯಾಂಕುಗಳೊಂದಿಗೆ ವ್ಯವಹರಿಸಲು ಮಂಡಳಿಗೆ ವಾಹನ ಅತ್ಯವಶ್ಯಕವಾಗಿತ್ತು ಹಾಗೂ ಸದ್ಯದಲ್ಲೇ "ಜನಶ್ರೀ ಬಿಮಾ ಯೋಜನೆಯನ್ನು" ಅನುಷ್ಠಾನಗೊಳಿಸಬೇಕಾಗಿದ್ದು, ಈ ಸಂಬಂಧ ಈಗಾಗಲೇ ಸದರಿ ಯೋಜನೆಯನ್ನು ಜಾರಿ ಮಾಡುತ್ತಿರುವ ಸರ್ಕಾರದ ವಿವಿದ ಇಲಾಖೆಗಳ ಮುಖ್ಯಸ್ಥರನ್ನು ಭೇಟಿಮಾಡಲು ಮಂಡಳಿಯ ಅಧಿಕಾರಿಗಳಿಗೆ ವಾಹನ ಅತ್ಯವಶ್ಯವಾಗಿದ್ದರಿಂದ, ಹೊರ ಗುತ್ತಿಗೆ ಆಧಾರದ ಮೇಲೆ ಸರ್ಕಾರವು ನಿಗದಿಪಡಿಸಿರುವ ದರದಲ್ಲಿ ವಾಹನವನ್ನು ಮಂಡಳಿಯ ಕೆಲಸ ಕಾರ್ಯಗಳಿಗೆ ಮಂಡಳಿಯ ಸದಸ್ಯ ಕಾರ್ಯದರ್ಶಿಯವರ ಅನುಮತಿ ಮೇರೆಗೆ ಪಡೆದಿರುವುದಾಗಿ ತಿಳಿಸಿದರು. ಮಂಡಳಿಯ ಕೆಲಸಗಳ ನಿಮಿತ್ತ, ಮಂಡಳಿಯ ಅಧಿಕಾರಿಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಸರ್ಕಾರವು ನಿಗದಿಪಡಿಸಿರುವ ದರದಲ್ಲಿ ವಾಹನವನ್ನು ಹೊರಗುತ್ತಿಗೆ ಮೇಲೆ ಪಡೆದಿರುವ ಬಗ್ಗೆ ಮಂಡಳಿಯ ಘಟನೋತ್ತರ ಮಂಜೂರಾತಿಯನ್ನು ಕೋರಿದರು.

ಈ ವಿಷಯದ ಬಗ್ಗೆ ಹೆಚ್ಚಿನ ಚರ್ಚೆ ನಡೆಯದೆ, ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

> **ನಿರ್ಣಯ :- ಮಂಡಳಿಯಲ್ಲಿ ಕೆಲಸ ಮಾಡುತ್ತಿರುವ ಸಹಾಯಕ ಕಾರ್ಮಿಕ ಆಯುಕ್ತರು ಹಾಗು ಕಾರ್ಮಿಕ ಅಧಿಕಾರಿಗಳಿಗೆ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲ ಕಲ್ಪಿಸಲು ಹೊರ ಗುತ್ತಿಗೆ ಆಧಾರದ ಮೇಲೆ ಸರ್ಕಾರವು ನಿಗದಿಪಡಿಸಿರುವ ದರದಲ್ಲಿ ಬಾಡಿಗೆಗೆ ವಾಹನವನ್ನು ಪಡೆದಿರುವುದಕ್ಕೆ ಮಂಡಳಿಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿಯನ್ನು ನೀಡಿತು.**

**ವಿಷಯ -3 : ಮಂಡಳಿಯ ಸದಸ್ಯರ ಭತ್ಯೆ (ಸಿಟ್ಟಿಂಗ್ ಫೀ) ಪರಿಷ್ಕರಿಸುವ ಬಗ್ಗೆ :-**

ಮಂಡಳಿಯ ಸದಸ್ಯರಾದ ಶ್ರೀ ಶ್ರೀಧರ್ ರಾವ್‌ರವರು ಮಂಡಳಿಯ ಸದಸ್ಯರುಗಳಿಗೆ ನಿಗಧಿಪಡಿಸಿರುವ ಭತ್ಯೆ ಸಿಟ್ಟಿಂಗ್ ಫೀ ತುಂಬಾ ಕಡಿಮೆ ಇದ್ದು, ದೂರದಿಂದ ಬರುವ

Scanned with OKEN Scanner

ಸದಸ್ಯರುಗಳಿಗೆ ಅನಾನುಕೂಲವಾಗುತ್ತಿದ್ದು, ಈಗಿರುವ ಭತ್ಯೆಗಳನ್ನು ಗಣನೀಯವಾಗಿ ಹೆಚ್ಚಳ ಮಾಡುವಂತೆ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿದರು. ಉಳಿದಂತೆ ಸದಸ್ಯರುಗಳಾದ ಈಶ್ವರ್ ವಿಶ್ವಕರ್ಮ, ಶ್ರೀಮತಿ ಸೌಭಾಗ್ಯ, ವೆಂಕಟೇಶ್ ಹಾಗು ಶ್ರೀ ನಜೀಬುಲ್ಲಾ ಖಾನ್ ಸೇರಿದಂತೆ ಹಾಜರಿದ್ದ ಎಲ್ಲಾ ಸದಸ್ಯರುಗಳು ಶ್ರೀಧರ್ ರಾವ್‌ರವರ ಪ್ರಸ್ತಾವನೆಯನ್ನು ಬೆಂಬಲಿಸಿದರು. ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಮಾನ್ಯ ಅಧ್ಯಕ್ಷರು ಸದಸ್ಯ ಕಾರ್ಯದರ್ಶಿಗಳು, ಕಾರ್ಮಿಕ ಆಯುಕ್ತರೊಂದಿಗೆ ಸಮಾಲೋಚನೆ ನಡೆಸಿ, ಪ್ರಸ್ತುತ ನಿಗಧಿಪಡಿಸಿರುವ ಸಿಟ್ಟಿಂಗ್ ಶುಲ್ಕವನ್ನು ದ್ವಿಗುಣ ಮಾಡಿ ಪಾವತಿಸಲು ಸಮ್ಮತಿಸಿದರು

**ನಿರ್ಣಯ :- ಮಂಡಳಿಯಲ್ಲಿ ಸದಸ್ಯರಿಗೆ ಈಗಿರುವ ಸಿಟ್ಟಿಂಗ್ ಶುಲ್ಕವನ್ನು ದ್ವಿಗುಣಗೊಳಿಸಲು ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

(ಶ್ರೀ ಬಿ. ಎನ್. ಬಚ್ಚೇಗೌಡ)
ಕಾರ್ಮಿಕ ಸಚಿವರು ಮತ್ತು ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.
ಬಿ.ಎನ್. ಬಚ್ಚೇಗೌಡ
ಕಾರ್ಮಿಕ ಮತ್ತು ರೇಷ್ಮೆ ಸಚಿವರು

(ಶ್ರೀ ಜಿ.ಎಸ್. ನಾರಾಯಣ ಸ್ವಾಮಿ)
ಸರ್ಕಾರದ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ,
ಬೆಂಗಳೂರು.

## ಅನುಬಂಧ-1

**ಹಾಜರಿದ್ದ ಸದಸ್ಯರು:**

1. ಸನ್ಮಾನ್ಯ ಶ್ರೀ ಬಿ.ಎನ್. ಬಚ್ಚೇಗೌಡ ಅವರು, ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಸರ್ಕಾರ, ಬೆಂಗಳೂರು. ಹಾಜರಿದ್ದರು.
2. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ಸದಸ್ಯ ಕಾರ್ಯದರ್ಶಿಗಳು. ಹಾಜರಿದ್ದರು.
3. ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಪರವಾಗಿ ಅವರ ಕಛೇರಿಯಿಂದ ಪ್ರತಿನಿಧಿ ಹಾಜರಿದ್ದರು.
4. ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರು ಹಾಜರಿದ್ದರು.
5. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆಯ ಪರವಾಗಿ, ಉಪ ಕಾರ್ಯದರ್ಶಿಗಳು ಹಾಜರಿದ್ದರು.
6. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ ಇವರು ಹಾಜರಿದ್ದರು.
7. ಶ್ರೀ ವಾಲ್ಮೀಕಿ ನಾಯಕ, ಶಾಸಕರು, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇವರು ಹಾಜರಿದ್ದರು.
8. ಶ್ರೀಮತಿ ಸೌಭಾಗ್ಯ ಈ.ಜಿ., ಪ್ರಧಾನ ಕಾರ್ಯದರ್ಶಿ, ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್ –ಕರ್ನಾಟಕ ರಿ. ಆಂಧ್ರಹಳ್ಳಿ ಮುಖ್ಯರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು
9. ಕೆ. ಕುಮಾರೇಸನ್, ಸಲಹೆಗಾರರು, ಮಂಡಿ ಹಮಾಲಿ ಸಂಘ, ಎ.ಪಿ.ಎಂ.ಸಿ.ಯಾರ್ಡ್, 6ನೇ ಮುಖ್ಯರಸ್ತೆ, ಸಮುದಾಯ ಭವನ, ಯಶವಂತಪುರ, ಬೆಂಗಳೂರು–22 ಇವರು ಹಾಜರಿದ್ದರು.
10. ಹರಿಶ್ಚಂದ್ರ ಮೆಂಡನ್ ಸನ್ ಆಫ್ ಸುಂದರಪುತ್ರನ್, ಸುಂದರರಂಗ, ಕುಳಾಯಿ ಹೊಸಬೆಟ್ಟು ಅಂಚೆ, ಮಂಗಳೂರು–575026.
11. ಶ್ರೀ ನಜೀಬುಲ್ಲಾ ಖಾನ್ ಬಿನ್ ರಸೂಲ್ ಖಾನ್, C/o ಕಾರ್ಪೋರೇಷನ್ ಬ್ಯಾಂಕ್, 1ನೇ ಮಹಡಿ, ಗಂಗಮ್ಮ ಗುಡಿ ರಸ್ತೆ, ಎಂ.ವಿ.ಎಕ್ಸ್‌ಟೆನ್‌ಷನ್, ಹೊಸಕೋಟೆ–562114 ಇವರು ಹಾಜರಿದ್ದರು.
12. ಶ್ರೀ ವೆಂಕಟೇಶ್, ರಾಂಪುರ, ವೀರ್ಗೇನಗರ ಅಂಚೆ, ಬೆಂಗಳೂರು ಪೂರ್ವ ತಾಲ್ಲೂಕು ಇವರು ಹಾಜರಿದ್ದರು.
13. ಶ್ರೀ ಈಶ್ವರ ವಿಶ್ವಕರ್ಮ ಬಿನ್ ಶ್ರೀ ನರಸಿಂಹಾಚಾರ್, ನಂ.2, ಡಾ. ರಾಜ್‌ಕುಮಾರ್ ರಸ್ತೆ, ಸುಗುಣ ಆಸ್ಪತ್ರೆ ಪಕ್ಕ, ಪ್ರಕಾಶನಗರ, ಬೆಂಗಳೂರು–560021.
14. ಶ್ರೀ ಟಿ.ಜಿ. ಶ್ರೀಧರ್ ರಾವ್, ಅಧ್ಯಕ್ಷರು, ಟೈಲರ್ಸ್ ಅಸೋಸಿಯೇಷನ್, ಶ್ರೀ ಶಕ್ತಿ ಅಸೋಸಿಯೇಟ್ಸ್, ಶ್ರೀ ಅಂಬಾಸದನ, ಎ–2ನೇ ಪ್ಯಾರಲಲ್ ರೋಡ್, ಗಾಂಧಿ ನಗರ, ಶಿವಮೊಗ್ಗ–577201.
15. ಶ್ರೀಮತಿ ಗೀತಾ ಮೆನನ್, ಸ್ತ್ರೀ ಜಾಗೃತಿ ಸಮಿತಿ, ಗೃಹ ಕಾರ್ಮಿಕರ ಹಕ್ಕಿನ ಒಕ್ಕೂಟ, ನಂ.1863, ಸೌತ ಎಂಡ್ 'ಸಿ' ಕ್ರಾಸ್, ಎಟೋ ಕ್ರಿಶ್ ಟೆಕ್ನಾಲಜೀಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು–78 ಇವರು ಹಾಜರಿದ್ದರು.
16. ಪ್ರೊ.ಜಿ.ಕೆ. ಕಾರಂತ್, ಪ್ರೊಫೆಸರ್ ಅಂಡ್ ಹೆಡ್, ಸೆಂಟರ್ ಫಾರ್ ಸ್ಟಡಿ ಆಫ್ ಸೋಷಿಯಲ್ ಚೇಂಜ್ ಅಂಡ್ ಡೆವಲಪ್‌ಮೆಂಟ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು–560072.

**ಇವರಿಗೆ Leave of Absence ನೀಡಲಾಯಿತು.**

1. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪರವಾಗಿ ಇಲಾಖೆಯ ಜಂಟಿ ನಿರ್ದೇಶಕರು ಇವರು ಹಾಜರಿದ್ದರು.
2. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ
3. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕಾ ಇಲಾಖೆ ಇವರ ಪರವಾಗಿ ಕಛೇರಿಯ ಪ್ರತಿನಿಧಿ
4. ಶ್ರೀ ಎಸ್.ಆರ್. ವಿಶ್ವನಾಥ, ಶಾಸಕರು, ಯಲಹಂಕ ಕ್ಷೇತ್ರ, ನಂ.14, ಸಿಂಗ ನಾಯಕನಹಳ್ಳಿ ಪೋಸ್ಟ್, ಯಲಹಂಕ ಹೋಬಳಿ, ಬೆಂಗಳೂರು ಉತ್ತರ, ಬೆಂಗಳೂರು–5600064.

Scanned with OKEN Scanner

5. ಶ್ರೀಮತಿ ಶಶಿಕಲಾ, ಗೃಹಕೃತ್ಯ ಕಾರ್ಮಿಕರು, ನಂ.112/4, ಇನ್‌ಫೆಂಟ್ರಿರಸ್ತೆ, ಶಿವಾಜಿನಗರ, ಬೆಂಗಳೂರು-560001 ಇವರು ಹಾಜರಿದ್ದರು.
6. ಶ್ರೀ ಪ್ರಸಾದ್, ಡೆವಲಪರ್ ಮತ್ತು ಬಿಲ್ಡರ್ಸ್, ಪ್ರಶಾಂತ ನಿಲಯ, ಓ ಫಾರ್ಮ್, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು
7. ಶ್ರೀ ರಮೇಶ್ ಚಂದ್ರ ಲಹೋಟಿ, ಅಧ್ಯಕ್ಷರು, ಬೆಂಗಳೂರು ಹೋಲ್‌ಸೇಲ್ ಫುಡ್‌ಗ್ರೇನ್ಸ್ ಅಂಡ್ ಪಲ್ಸಸ್ ಮಾರ್ಚೆಂಟ್ಸ್ ಅಸೋಸಿಯೇಷನ್, 1ನೇ ಮಹಡಿ, ಎಂ.ಜಿ.ಬಿ., ಎ.ಪಿ.ಎಂ.ಸಿ. ಯಾರ್ಡ್, ಯಂಶವಂತಪುರ, ಬೆಂಗಳೂರು-560022.
8. ಶ್ರೀ ಕ್ಲೀಪ್‌ಟನ್ ಡಿ. ರೋಸಾರಿಯಾ, ಸದಸ್ಯ, ಆಲ್ಟರ್‌ನೇಟಿವ್ ಲಾ ಫೋರಮ್ (ಎಎಲ್‌ಎಫ್), ನಂ.122/4, ಇನ್‌ಫೆಂಟ್ರಿ ರಸ್ತೆ, ಇನ್‌ಫೆಂಟ್ರಿ ವೆಡ್ಡಿಂಗ್ ಹಾಲ್ ಎದುರು, ಬೆಂಗಳೂರು-1.
9. ಪ್ರೋ. ಎಸ್.ಮಾದೇಶ್ವರನ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಮಿಕ್ ಚೆಂಜ್, ನಾಗರಭಾವಿ, ಬೆಂಗಳೂರು-560072.

Scanned with OKEN Scanner

## ಅನುಬಂಧ-2

## ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ

ಅಪಘಾತಗಳಿಗೆ ತುತ್ತಾಗಿ ಸಂಕಷ್ಟಕ್ಕೆ ಸಿಲುಕುವ ಖಾಸಗಿ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಬಸ್ ವಾಹನ ಚಾಲಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ನೆರವು ನೀಡಲು ರಾಜ್ಯ ಸರ್ಕಾರ 2011-12 ನೇ ಸಾಲಿನಲ್ಲಿ "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ" ಎಂಬ ಹೆಸರಿನಲ್ಲಿ ನೂತನ ವಿಮಾ ಯೋಜನೆಯನ್ನು ಘೋಷಣೆ ಮಾಡಿ ಆದೇಶ ಹೊರಡಿಸಿರುತ್ತದೆ. ಈ ಯೋಜನೆಯಡಿ ನೊಂದಣಿಯಾದ ಫಲಾನುಭವಿಗಳಿಗೆ ತಗಲುವ ಪ್ರೀಮಿಯಂ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಯೋಜನೆಗೆ 2011-12ನೇ ಸಾಲಿನಲ್ಲಿ ಹಾಗೂ 2012-13 ನೇ ಸಾಲಿನಲ್ಲಿ ಕ್ರಮವಾಗಿ ರೂ. 2ಕೋಟಿ ಮತ್ತು ರೂ. 4 ಕೋಟಿ ಆಯವ್ಯಯವನ್ನು ಸರ್ಕಾರ ಕಾಯ್ದಿರಿಸಿರುತ್ತದೆ.

ಅಸಂಘಟಿತ ವಲಯಗಳ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಸದರಿ ಯೋಜನೆಯನ್ನು ಅನುಷ್ಠಾನ ಮಾಡಲು ನಿರ್ಧರಿಸಲಾಗಿದೆ. ಮಂಡಳಿ ಆಯ್ಕೆ ಮಾಡಿರುವ ವಿಮಾ ಕಂಪನಿಯ ಮುಖಾಂತರ ಮೇಲೆ ತಿಳಿಸಿರುವ ಚಾಲಕರು ಮತ್ತು ಅವರ ಅವಲಂಬಿತರು ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಬಿಡ್ ಮೂಲಕ ರಾಯಲ್ ಸುಂದರಂ ಅಲೈಯನ್ಸ್ ಇನ್ಶೂರೆನ್ಸ್ ಕಂಪನಿ ಎಂಬ ವಿಮಾ ಕಂಪನಿಯನ್ನು ಗುರುತಿಸಲಾಗಿದೆ ಹಾಗೂ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿ ನೊಂದಣಿ ಮಾಡಲು ತಂತ್ರಾಂಶದ ಅವಶ್ಯಕತೆಯಿರುವ ಓನ್ಲೈನಲ್ಲಿ ತಂತ್ರಾಂಶ ಅಭಿವೃದ್ಧಿ ಮತ್ತು ನೊಂದಣಿಗೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ ಕಾಯ್ದೆ ಅನ್ವಯ ಟೆಂಡರ್ ಕರೆದು, ಮೈಕ್ರೋರ್ ಐಟಿ ಸಲ್ಯೂಷನ್ ಎಂಬ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ.

ಸದರಿ ಯೋಜನೆಗೆ ದಿನಾಂಕ : 30-06-2012 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಚಾಲನೆ ನೀಡಿದ್ದು, ದಿನಾಂಕ : 15-07-2012 ರಿಂದ ರಾಜ್ಯದಾದ್ಯಂತ ಚಾಲಕರ ನೊಂದಣಿ ಕಾರ್ಯವನ್ನು ಪ್ರಾರಂಭಿಸಲಾಗಿದೆ.

### ಯೋಜನೆಯ ವಿಶೇಷತೆಗಳು

### ಯೋಜನೆಯ ವ್ಯಾಪ್ತಿ

1. ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
2. ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಚಾಲನಾ ಪರವಾನಗಿ ಪಡೆದ ಖಾಸಗಿ ಆಟೋ, ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಖಾಸಗಿ ಬಸ್ ವಾಹನ ಚಾಲಕರಿಗೆ ಮಾತ್ರ ಅನ್ವಯಿಸುತ್ತದೆ.
3. ಯೋಜನೆಯಡಿ ಫಲಾನುಭವಿಯು ಪ್ರೀಮಿಯಂ ಪಾವತಿಸಬೇಕಾಗಿಲ್ಲ, ಯೋಜನೆಯು ಸಂಪೂರ್ಣ ಉಚಿತವಾಗಿದ್ದು, ಸರ್ಕಾರವೇ ಪೂರ್ಣವಾಗಿ ಪ್ರೀಮಿಯಂ ಮೊತ್ತವನ್ನು ಪಾವತಿಸಲಿದೆ.

### ಅಪಘಾತ ಪರಿಹಾರ ದೊರಕುವ ಸಂದರ್ಭಗಳು

ಎ. ಅಪಘಾತದಿಂದ ಚಾಲಕನು ಪ್ರಾಣಾಪಾಯಕ್ಕೆ ತುತ್ತಾದಾಗ

ಬಿ. ಅಪಘಾತದಿಂದ ಚಾಲಕರು ಶಾಶ್ವತ ದುರ್ಬಲತೆ ಹೊಂದಿದಾಗ

ಸಿ. ಅಪಘಾತದಿಂದ ಚಾಲಕರು ತಾತ್ಕಾಲಿಕ ದುರ್ಬಲತೆ ಹೊಂದಿದಾಗ

ಡಿ. ಚಾಲಕರು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಅಪಘಾತಕ್ಕೀಡಾಗಿ ಮರಣ ಹೊಂದಿದಲ್ಲಿ ಅಥವ ಶಾಶ್ವತ/ತಾತ್ಕಾಲಿಕ ದುರ್ಬಲತೆ ಹೊಂದಿದಾಗ ಯೋಜನೆಯ ಸೌಲಭ್ಯ ಲಭ್ಯವಾಗುತ್ತದೆ.

Scanned with OKEN Scanner

## ಅಪಘಾತ ವಿಮೆ

1. ಯೋಜನೆಯು ಮೇಲೆ ತಿಳಿಸಿರುವ ಖಾಸಗಿ ವಾಣಿಜ್ಯ ವಾಹನಗಳ ಚಾಲಕರಿಗೆ ಮಾತ್ರ ಅನ್ವಯಿಸುತ್ತದೆ. ಚಾಲಕರು ಚಾಲ್ತಿಯಲ್ಲಿರುವ ವಾಣಿಜ್ಯ ವಾಹನ ಚಾಲನಾ ಪರವಾನಗಿ ಹೊಂದಿರಬೇಕು.
2. ಈ ಯೋಜನೆಯ ಸೌಲಭ್ಯ ಪಡೆಯಲು ಸದರಿ ಚಾಲಕರು ಒಂದು ಬಾರಿ ಮಾತ್ರ ರೂ, 25/- ನೋಂದಣಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ನೊಂದಣಿ ಮಾಡಿಸಿಕೊಳ್ಳಬೇಕು.
3. ಯೋಜನೆಗೆ ವಯಸ್ಸಿನ ಮಿತಿ 20 ರಿಂದ 70 ವರ್ಷಗಳು.
4. ವಿಮಾ ಮೊತ್ತ ಗರಿಷ್ಠ ರೂ. 2 ಲಕ್ಷಗಳವರೆಗೆ ಲಭ್ಯವಿರುತ್ತದೆ.
5. ಈ ಯೋಜನೆಯಡಿ ನೊಂದಾಯಿತರಾದ ಚಾಲಕರು ಮರಣ ಹೊಂದಿದಲ್ಲಿ ಮೃತರ ನಾಮನಿರ್ದೇಶಿತರು ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

Scanned with OKEN Scanner

## ಅನುಬಂಧ -3

## ಯೋಜನೆಯ ವಿಶೇಷತೆಗಳು

- ಜನಶ್ರೀ ಬಿಮಾ ಯೋಜನೆಯು ವಿಶೇಷವಾಗಿ ಅಸಂಘಟಿತ ವಲಯದ ಕಾರ್ಮಿಕರು ಮತ್ತು ಬಿಪಿಎಲ್ ಕುಟುಂಬಗಳ ಸದಸ್ಯರಿಗಾಗಿ ರೂಪಿಸಲಾದ ವಿಮಾ ಯೋಜನೆ.
- ವಯಸ್ಸಿನ ಮಿತಿ 18 ರಿಂದ 59 ವರ್ಷ.
- ಫಲಾನುಭವಿಗೆ ಸಹಜ ಮರಣ ಸಂಭವಿಸಿದಲ್ಲಿ ರೂ. 30,000/- ವನ್ನು ಆತನ ನಾಮನಿರ್ದೇಶಿತನಿಗೆ ನೀಡಲಾಗುತ್ತದೆ.
- ಒಂದು ವೇಳೆ ಅಪಘಾತ ಸಂಭವಿಸಿದಲ್ಲಿ ನಾಮನಿರ್ದೇಶಿತ/ಫಲಾನುಭವಿಗೆ ಈ ಕೆಳಗಿನ ಸೌಲಭ್ಯಗಳು ದೊರೆಯುತ್ತವೆ.
  - ಅಪಘಾತದಿಂದ ಮರಣ ಸಂಭವಿಸಿದಲ್ಲಿ ರೂ.75,000/- ಗಳನ್ನು ಆತನ ನಾಮನಿರ್ದೇಶಿತನಿಗೆ ನೀಡಲಾಗುತ್ತದೆ.
  - ಅಪಘಾತದಿಂದ ಶಾಶ್ವತ ದುರ್ಬಲತೆ ಸಂಭವಿಸಿದಲ್ಲಿ ರೂ.75,000/- ಗಳನ್ನು ಫಲಾನುಭವಿಗೆ ಪಾವತಿಸಲಾಗುತ್ತದೆ.
  - ಅಪಘಾತದಿಂದ ಎರಡು ಕಣ್ಣು ಅಥವಾ ಎರಡು ಕಾಲು ಕಳೆದುಕೊಂಡಲ್ಲಿ ರೂ.75,000/- ವನ್ನು ಫಲಾನುಭವಿಗೆ ಪಾವತಿಸಲಾಗುತ್ತದೆ.
  - ಅಪಘಾತದಿಂದ ಒಂದು ಕಣ್ಣು ಅಥವಾ ಒಂದು ಕಾಲು ಕಳೆದುಕೊಂಡಲ್ಲಿ ರೂ.37,500/- ವನ್ನು ಫಲಾನುಭವಿಗೆ ಪಾವತಿಸಲಾಗುತ್ತದೆ.
- ಈ ಯೋಜನೆಯಡಿ ಸಹಜ ಮರಣ ಮತ್ತು ಅಪಘಾತ ಪರಿಹಾರ ಸೌಲಭ್ಯಗಳನ್ನು ಹೊರತುಪಡಿಸಿ ಫಲಾನುಭವಿಯ ಮಕ್ಕಳ ಅನುಕೂಲಕ್ಕಾಗಿ "ಶಿಕ್ಷಾ ಸಹಯೋಗ" ಎಂಬ ವಿದ್ಯಾರ್ಥಿ ವೇತನ ಸೌಲಭ್ಯವನ್ನು ನೀಡಲಾಗುತ್ತದೆ.
- ಈ ಸೌಲಭ್ಯದಡಿ 9ನೇ ತರಗತಿ ಯಿಂದ 12ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ (ಐಟಿಐ ಕೋರ್ಸ್ ಒಳಗೊಂಡಂತೆ) 6 ತಿಂಗಳಿಗೆ ರೂ. 600 ರಂತೆ ವಾರ್ಷಿಕ ರೂ. 1200/- ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.
- ವಿದ್ಯಾರ್ಥಿ ವೇತನ ಸೌಲಭ್ಯವು ಗರಿಷ್ಠ 4 ವರ್ಷಗಳ ಅವಧಿಗೆ ಮಾತ್ರ ದೊರಕುತ್ತದೆ.
- ಈ ಸೌಲಭ್ಯವು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ದೊರೆಯುವುದಿಲ್ಲ.
- ಈ ಸೌಲಭ್ಯವು ಒಂದು ಕುಟುಂಬದ ಎರಡು ಮಕ್ಕಳಿಗೆ ಮಾತ್ರ ದೊರೆಯುತ್ತದೆ.

Scanned with OKEN Scanner

## ಅನುಬಂಧ –4

**ಹೊಸದಾಗಿ ಗುರುತಿಸಲಾಗಿರುವ ಅಸಂಘಟಿತ ವಲಯಗಳ ಕಾರ್ಮಿಕರು**

2. ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
3. ನಾರಿನ ಉದ್ದಿಮೆಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
4. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು
5. ಮೀನುಗಾರರು
6. ಕುಂಬಾರರು
7. ಚಮ್ಮಾರರು
8. ಕ್ಷೌರಿಕರು
9. ಕಸಾಯಿ ಖಾನೆ ಕಾರ್ಮಿಕರು
10. ಕಮ್ಮಾರರು
11. ಚಿನಿವಾರರು/ಅಕ್ಕಸಾಲಿಗರು
12. ಮನೆಗಳಲ್ಲಿ ಬೀಡಿ ಕಟ್ಟುವವರು
13. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು
14. ಶಿಲ್ಪಕಾರರು/ ಹಸ್ತ ಕುಶಲ ಕಾರ್ಮಿಕರು
15. ಚಿತ್ರ ಬಿಡಿಸುವವರು
16. ಬಿದಿರಿನ ವಸ್ತುಗಳನ್ನು ತಯಾರು ಮಾಡುವವರು
17. ಖಾದ್ಯ ತೈಲ/ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು.
18. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
19. ರೇಷ್ಮೆ ಕಾರ್ಮಿಕರು
20. ಕಾಟನ್ ಗಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
21. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
22. ಕಲ್ಲು ಒಡೆಯುವ ಕಾರ್ಮಿಕರು
23. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
24. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
25. ಬೀದಿ ಬದಿಯ ಮಾರಟಗಾರರು
26. ಚಾಲಕರು/ನಿರ್ವಾಹಕರು/ಸಹಾಯಕರು/ ಕ್ಲೀನರ್‌ಗಳು/ ಗಾಡಿ ಎಳೆಯುವವರು/ ರಿಕ್ಷಾ ವಾಲಾಗಳು/ ಟಾಂಗಾವಾಲಾಗಳು.
27. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
28. ಚಿಂದಿ ಆಯುವವರು
29. ಅಡಿಗೆ ಕೆಲಸಗಾರರು/ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು/ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು
30. ಸಫಾಯಿ ಕರ್ಮಚಾರಿಗಳು
31. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು
32. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮೆನ್‌ಗಳು
33. ಪೋರ್ಟರ್ಸ್

Scanned with OKEN Scanner